

ಬಾಲು ಅವರ ಆಸಕ್ತಿಯ ವಲಯಗಳು ಜೀವವೈವಿಧ್ಯದಷ್ಟೇ ವಿಸ್ತಾರವಾದವು. ವಿಜ್ಞಾನದಿಂದ ಮೊದಲ್ಗೊಂಡು ಸಾಹಿತ್ಯ, ಸೂಫಿ, ಝೆನ್ ತತ್ವದರ್ಶನಗಳವರೆಗೆ ಹೊಕ್ಕಾಡಿದರೂ ಅಂತಿಮವಾಗಿ ಅವರ ಮನಸ್ಸು ನೆಲೆಗೊಳ್ಳುವುದು ಜೀವಕಾರುಣ್ಯದಲ್ಲೇ. ಕಾಲೂರಿದ ಲೌಕಿಕ ಬದುಕಿನ ಬೇರುಗಳಲ್ಲೇ ಅಲೌಕಿಕ ಗುಂಗು ಹೀರಬಲ್ಲರಾದರೂ ಮಣ್ಣಿನ ತಾಯಿ ಗುಣದಿಂದ ಅವರೆಂದೂ ದೂರವಾಗಿಲ್ಲ. ಚಿಂತನೆಗಳ ಶ್ರೇಷ್ಠತೆಗೆ ಸಹಜವಾಗಿ ತುಡಿದರೂ, ವ್ಯಸನಿಯಲ್ಲ. ಹಾಗಾಗಿಯೇ ಅವರ ಲೇಖನ ಅಭಿವ್ಯಕ್ತಿ ಸರಳತೆಯಲ್ಲೇ ಸೌಂದರ್ಯವನ್ನು ಹಿಡಿವ ಬಾಲ್ಯ ಸಂಭ್ರಮದ್ದು! ಬ್ರಹ್ಮಾಂಡದ ಅನಂತ ನಿಗೂಢತೆ, ನಿಸರ್ಗದ ನಿಷ್ಠುರ ಲಯಗಳು, ಮನುಷ್ಯರಾಳದ ಇನ್‌ಸ್ಟಿಂಕ್ಟ್‌ಗಳನ್ನು ಹಾಗೂ ಮನೋವಿಜ್ಞಾನದ ಅಜ್ಞಾತ ಪದರಗಳನ್ನು ಬಿಚ್ಚಿ ತಡವಿ ನೋಡುವ ಅವರ ಅನನ್ಯ ಪ್ರಯೋಗಗಳಿಂದಾಗಿ ಬಾಲು ಬರವಣಿಗೆಗೆ ಸಾಹಿತ್ಯೇತರವಾದ ಕೌತುಕದಾಯಕಾಯಾಮಗಳೂ ದಕ್ಕುತ್ತವೆ. ಇಂತಹ ಕಾರಣಗಳಿಂದಾಗಿಯೇ ನಾನು ಬಾಲು ಬರವಣಿಗೆಯ ಮೊದಲ ಸಾಲಿನ ಓದುಗನಾಗಿದ್ದೇನೆ.

ಲಕ್ಷ್ಮೀಪತಿ ಕೋಲಾರ



ಮಾತಾಹರಿ

ಡಾ. ಜೆ. ಬಾಲಕೃಷ್ಣ



ಮಾತಾಹರಿ

ಡಾ. ಜೆ. ಬಾಲಕೃಷ್ಣ

MATAHARI - Life story of Matahari written by **Dr. J.Balakrishna**, Asst. Professor, Department of Kannada Studies, University of Agricultural Sciences, Hebbal, Bangalore-560024.

Published by: Pragati Graphics-Bangalore, # 119 3rd Cross, 8th Main Road, Hampinagara (RPC. Layout) Vijayanagara, Bangalore - 560 040. Ph : 080 2340 9512

Pages	: 56
First Impression	: 2007
Paper	: NS Maplitho 80 GSM
Price	: Rs. 25/-
Rights	: Dr. J. Balakrishna

ಪುಟಗಳು	: 56
ಮೊದಲ ಮುದ್ರಣ	: 2007
ಕಾಗದ	: NS Maplitho80 GSM
ಬೆಲೆ	: ರೂ. 25/-
ಹಕ್ಕುಗಳು	: ಡಾ. ಜೆ. ಬಾಲಕೃಷ್ಣ

ಡಾ.ಜೆ.ಬಾಲಕೃಷ್ಣ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾನಿಲಯ
ಜಿ.ಕೆ.ವಿ.ಕೆ., ಬೆಂಗಳೂರು–560065
j.balakrishna@gmail.com

ಮುಖಪುಟ	: ಕೃಷ್ಣ ರಾಯಚೂರ್
ಪ್ರಕಾಶಕರು	: ಡಾ. ಎಂ. ಬೈರೇಗೌಡ, ಪ್ರಗತಿ ಗ್ರಾಫಿಕ್ಸ್, ನಂ. 119, 3ನೇ ತಿರುವು, 8ನೇ ಮುಖ್ಯರಸ್ತೆ,ಆರ್.ಪಿ.ಸಿ. ಬಡಾವಣೆ, ಬೆಂಗಳೂರು – 40 ದೂರವಾಣಿ: 080–

ಪ್ರೀತಿ ಮತ್ತು ಯುದ್ಧದ ಕ್ರೌರ್ಯ...

ಮಾತಾ ಹರಿಯ ಹೆಸರು ಬೇಹುಗಾರಿಕೆ, ಗೂಢಚರ್ಯೆ, ನಿಗೂಢತೆ ಹಾಗೂ 'ಸೆನ್ಷುಯಾಲಿಟಿ'ಯೊಂದಿಗೆ ಸೇರಿಹೋಗಿದೆ. ಸಾಧಾರಣ ಕುಟುಂಬದ ಈ ಹುಡುಗಿ ಅತಿ ಭವ್ಯ ಕನಸುಗಳನ್ನು ಕಂಡವಳು, ಬದುಕನ್ನು ಅತಿಯಾಗಿ ಪ್ರೀತಿಸುತ್ತಿದ್ದವಳು. ಅದೇ ಅವಳ ಬದುಕಿನ ದುರಂತಗಳಿಗೆ ಕಾರಣವಾಯಿತು. ಬದುಕಲು ಬೇರೆ ದಾರಿ ಕಾಣದಾದಾಗ ಮಾತಾ ಹರಿ ತನ್ನೆಲ್ಲ ಬದುಕಿನ ವೈಯಕ್ತಿಕ ದುರಂತಗಳಿಗೆ ಪರದೆ ಮುಚ್ಚಿ ತನ್ನ ದೇಹದ ಮೇಲಿನ ವಸ್ತ್ರ ಪರದೆಗಳನ್ನು ಒಂದೊಂದಾಗಿ ಜನರೆದುರು ತೆರೆದು ಅವರನ್ನು ಮೋಹಕಗೊಳಿಸಿದವಳು. ಅವಳು ಭಾರತವನ್ನೇ ನೋಡಿಲ್ಲದಿದ್ದರೂ ತಾನೊಬ್ಬ ಬ್ರಾಹ್ಮಣ ಪೂಜಾರಿಯ ಹಾಗೂ ಕಾಳಿ ದೇವಿಯ ದೇವಸ್ಥಾನದ ದೇಗುಲ ನರ್ತಕಿಯ ಮಗಳೆಂದು ಹೇಳಿಕೊಂಡವಳು. ತಾನು ಮಾಡುತ್ತಿದ್ದ 'ಕ್ಯಾಬರೆ' ನೃತ್ಯವನ್ನೇ ಶಿವನ ಆರಾಧನೆಯ ನೃತ್ಯವೆಂದು ಹೇಳಿ ಭಾರತವೆಂದರೆ ನಿಗೂಢ ದೇಶ, ಅಲ್ಲಿರುವುದೆಲ್ಲ ಅದ್ಭುತ ಎಂದು ನಂಬಿದ್ದ ಯೂರೋಪಿಯನ್ ಜನರನ್ನು ಮರುಳುಗೊಳಿಸಿದವಳು.

ಮಾತಾ ಹರಿಯ ಬದುಕು ನಿಗೂಢಗಳಿಂದ ತುಂಬಿದೆ. ಆಕೆ ಗೂಢಚಾರಳಾಗಿದ್ದಳೇ ಎನ್ನುವುದು ಇಂದಿಗೂ ತಿಳಿದುಬಂದಿಲ್ಲ. ಮೊದಲನೆಯ ವಿಶ್ವಯುದ್ಧದ ಸಮಯದಲ್ಲಿ ಆಕೆಯ ಐಶಾರಾಮಿ ಬದುಕು, ಅವಳ 'ಗೆಳೆಯರ ವೃಂದ', 'ವ್ಯಭಿಚಾರದ' ಬದುಕು ಅವಳನ್ನು ಗುಮಾನಿಯಿಂದ ನೋಡುವಂತಿತ್ತು. ಫ್ರೆಂಚ್ ಅಧಿಕಾರಿಗಳಿಗೆ ಅಷ್ಟೇ ಸಾಕಾಗಿತ್ತು. ರಾಷ್ಟ್ರಪತಿಯವರಿಗೆ ಸಲ್ಲಿಸಿದ್ದ ಅವಳ 'ದಯೆ ಕೋರಿಕೆ' ಅರ್ಜಿಯನ್ನೂ ಮನ್ನಿಸದೆ ಅವಳನ್ನು ಕೊಲ್ಲಲಾಯಿತು. ಆಕೆಯನ್ನು ವಿಚಾರಣೆಗೆ ಒಳಪಡಿಸಿದ ಅಧಿಕಾರಿ ಕ್ಯಾಪ್ಟನ್ ಬೋಷಾರ್ಡನ್, 'ಆಕೆಯ ಬಹುಭಾಷಾ ಚಾತುರ್ಯ, ಅಸಂಖ್ಯಾತ ಸಂಪರ್ಕಗಳು, ಅದ್ವಿತೀಯ ಬುದ್ಧಿಶಕ್ತಿ ಮತ್ತು ಆಂತರಿಕ ಅಥವಾ ರೂಢಿಸಿಕೊಂಡ ಅನೈತಿಕತೆ ಎಲ್ಲವೂ

ಆಕೆಯನ್ನು ಗುಮಾನಿಯಾಗಿ ನೋಡುವಂತೆ ಮಾಡುತ್ತವೆ. ಯಾವುದೇ ಧರ್ಮಭೀತಿಯಿಲ್ಲದೆ ಗಂಡಸರನ್ನು ಹೇಗೆ ಬಳಸಿಕೊಳ್ಳಬೇಕೆಂದು ತಿಳಿದಿರುವ ಆಕೆ ಗೂಢಚಾರಳಾಗಲೆಂದೇ ಹುಟ್ಟಿರುವ ಹೆಂಗಸು' ಎಂದು ಹೇಳಿದ್ದ. ಆಕೆ ಸತ್ತ ಹದಿನೈದು ವರ್ಷಗಳ ನಂತರ ಯುದ್ಧದ ದಿನಗಳ ಬಗ್ಗೆ ಮಾತನಾಡುವಾಗಲೂ ಆತ ಆಕೆಯ ಯಾವುದೇ ಬೇಹುಗಾರಿಕೆ ಕಾರ್ಯವನ್ನು ತೋರಿಸಲು ವಿಫಲನಾಗಿದ್ದ. ಆಕೆಯ ಬದುಕಿನ ಬಗ್ಗೆ ಎಲ್ಲ ಮಾಹಿತಿಯನ್ನೂ ಕಲೆಹಾಕಿ ಅಧ್ಯಯನ ನಡೆಸಿದ ಪಾಲ್ ಅಲರ್ಡ್ ಎಂಬಾತ, 'ಪ್ರಖ್ಯಾತ ನರ್ತಕಿ–ಗೂಢಚಾರಿ ಮಾತಾ ಹರಿಯ ಬಗೆಗಿನ ಎಲ್ಲ ಮಾಹಿತಿಯನ್ನೂ ಅಧ್ಯಯನ ನಡೆಸಿದ್ದೇನೆ. ಆದರೆ ಆಕೆಯ ಬೇಹುಗಾರಿಕೆಯ ಕಾರ್ಯವೇನೆಂಬುದು ನನಗಿನ್ನೂ ತಿಳಿದಿಲ್ಲ. ವಾಸ್ತವಾಂಶವೆಂದರೆ ನನಗಷ್ಟೇ ಅಲ್ಲ, ಬೇರ್‍ಯಾರಿಗೂ ಸಹ ತಿಳಿದಿಲ್ಲ! ಸಾಮಾನ್ಯ ಫ್ರೆಂಚ್‌ನವನನ್ನು ಕೇಳಿ ಅಥವಾ ಅತ್ಯಂತ ಬುದ್ಧಿಶಾಲಿ ಫ್ರೆಂಚ್‌ನವನನ್ನು ಕೇಳಿ ಮಾತಾ ಹರಿಯ ಅಪರಾಧವೇನೆಂಬುದನ್ನು, ನಿಮಗೆ ಉತ್ತರವೇ ಸಿಗುವುದಿಲ್ಲ. ಅವರೆಲ್ಲ ಆಕೆ ಅಪರಾಧಿಯೆಂದಷ್ಟೇ ಹೇಳುತ್ತಾರೆ' ಎಂದು ಹೇಳಿದ್ದಾನೆ. ವಾಸ್ತವವಾಗಿ ಮಾತಾ ಹರಿ ಬದುಕನ್ನು ಅತಿಯಾಗಿ ಪ್ರೀತಿಸುವ ಹೆಣ್ಣಾಗಿದ್ದಳು. ಅವಳ ಬದುಕಿನ ಪ್ರೀತಿ ಮತ್ತು 'ಪೌರುಷ' ಯುದ್ಧದ ಕ್ರೌರ್ಯ ಮುಖಾಮುಖಿಯಾಗಿ ನಿಲ್ಲಲು ಸಾಧ್ಯವಿರಲಿಲ್ಲ. ಯಾವುದಾದರೊಂದು ಸೋಲಲೇಬೇಕಿತ್ತು. ಆ ಕ್ರೌರ್ಯಕ್ಕೆ 'ಮುಂಜಾವಿನ ಕಣ್ಣು'– ಮಾತಾ ಹರಿ ಬಲಿಯಾದಳು.

ಬದುಕಿನಲ್ಲಿ ವೈಯಕ್ತಿಕವಾಗಿ ಧಾರುಣ ದುರಂತಗಳನ್ನು ಕಂಡ ಮಾತಾ ಹರಿ ಸಾವಿನಲ್ಲೂ ದುರಂತ ಕಂಡವಳು. ಲೆಕ್ಕವಿಡದಷ್ಟು ಇನಿಯರನ್ನು ಹೊಂದಿದ್ದ ಆಕೆಯ ದೇಹವನ್ನು ಸತ್ತ ಮೇಲೆ ಪಡೆಯಲು ಯಾರೂ ಮುಂದೆ ಬರಲಿಲ್ಲ. ಆಕೆಯ ದೇಹವನ್ನು ವಿದ್ಯಾರ್ಥಿಗಳ ಅಧ್ಯಯನಕ್ಕೆಂದು ವೈದ್ಯಕೀಯ ಶಾಲೆಗೆ ನೀಡಲಾಯಿತು. ಆಕೆಯ ತಲೆಯನ್ನು ಎಲ್ಲ ಪ್ರಖ್ಯಾತ ಅಪರಾಧಿಗಳ ತಲೆಯಂತೆ ಕತ್ತರಿಸಿ ಪ್ಯಾರಿಸ್ಸಿನ 'ಮೆಕಾಬರ್' ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿತ್ತು. ಎರಡನೇ ವಿಶ್ವಯುದ್ಧದ ಸಮಯದಲ್ಲಿ ಆ ತಲೆಯೂ ನಿಗೂಢವಾಗಿ ಮಾಯವಾಯಿತು.

– ಡಾ. ಜೆ. ಬಾಲಕೃಷ್ಣ



1

ನ್ಯಾಯಾಧೀಶ: ದಯವಿಟ್ಟು ನಿಮ್ಮ ಹೆಸರು ಹೇಳಿ.

ಮಾತಾ ಹರಿ: ಮಾತಾ ಹರಿ, ಸರ್.

ನ್ಯಾ: ಅದು ನಿನ್ನ ನಿಜವಾದ ಹೆಸರೆ?

ಮಾ.ಹ.: ಅಲ್ಲ, ನನ್ನ ಹುಟ್ಟು ಹೆಸರು ಮಾರ್ಗರೆಟ್ ಜೆಟ್ರೂಡ್ ಝೆಲ್ಲೆ.

ನ್ಯಾ: ನಿಮ್ಮ ಹೆಸರು ಏಕೆ ಬದಲಿಸಿಕೊಂಡಿರಿ? ನಿಮ್ಮ ಬೇಹುಗಾರಿಕೆಗೆ ಅನುಕೂಲವಾಗುತ್ತದೆಂದೆ?

ಮಾ.ಹ.: ಖಂಡಿತಾ ಇಲ್ಲ, ಮಾತಾ ಹರಿ ನನ್ನ ನೃತ್ಯ ನಾಮ. 1903ರಿಂದ 1906ರವರೆಗೆ ಹಲವಾರು ಯೂರೋಪಿಯನ್ ನಗರಗಳಲ್ಲಿ ನಾನು ಜಾವಾದ ಕಾಮೋದ್ರೇಕ ದೇಗುಲ ನೃತ್ಯಗಳನ್ನು ಪ್ರದರ್ಶಿಸುತ್ತಿದ್ದೆ.

ನ್ಯಾ: ಹಾ! ಹೌದು, ನನಗೆ ನೆನಪಿದೆ..... ಮಾತಾ ಹರಿ..... ಅದರಲ್ಲಿ ನೀನು ಬಹಳ ಯಶಸ್ವಿಯಾಗಿದ್ದೆಯಲ್ಲವೆ?

ಮಾ.ಹ: ಹೌದು, ಸರ್.

ನ್ಯಾ: ನಮ್ಮ ದೇಶದಲ್ಲಿ ನೀನು ಜರ್ಮನ್ನರಿಗೇಕೆ ಬೇಹುಗಾರಿಕೆ ಮಾಡಲು ನಿರ್ಧರಿಸಿದೆ?

ಮಾ.ಹ: ಸುಳ್ಳು! ನಾನೆಂದಿಗೂ ಬೇಹುಗಾರಿಕೆ ಮಾಡಿಲ್ಲ.

ನ್ಯಾ: ಮಿಸಸ್ ಝೆಲ್ಲೆ, 1916ರಿಂದ 1917ರವರೆಗೆ ನೀವು ಬೇಹುಗಾರಿಕೆ ಮಾಡಿರುವ ಆರೋಪದ ಮೇಲೆ ಇಲ್ಲಿ ನಿಮ್ಮನ್ನು ನಿಲ್ಲಿಸಲಾಗಿದೆ. ಹಾಗಾಗಿ ದಯವಿಟ್ಟು ಇಲ್ಲವೆನ್ನಬೇಡಿ. 1916ರಲ್ಲಿ ಒಂದು ವಿಮಾನನಿಲ್ದಾಣದ ಬಳಿಯ ಆಸ್ಪತ್ರೆಯ ಬಳಿ ಕೆಲ ಕಾಲ ಕಳೆದರಲ್ಲವೆ?

ಮಾ.ಹ: ಹೌದು, ನನ್ನ ಗೆಳೆಯನೊಬ್ಬ ಆಸ್ಪತ್ರೆಯಲ್ಲಿದ್ದ. ಅವನ ಶುಶ್ರೂಶೆಗೆ ಅಲ್ಲಿಗೆ ಹೋಗಿದ್ದೆ.

ನ್ಯಾ: ಅಲ್ಲದೆ, ವಿಮಾನಗಳು ಆ ನಿಲ್ದಾಣದಿಂದ ಜರ್ಮನ್ ಕಾರ್ಖಾನೆಗಳ ಮೇಲೆ ಬಾಂಬ್ ದಾಳಿ ಮಾಡಲು ಹೋಗುತ್ತಿದ್ದವು. ಅವುಗಳ ಬಗ್ಗೆಯೂ ನೀವು ಜರ್ಮನ್ನರಿಗೆ ತಿಳಿಸಿದರಲ್ಲವೆ?

ಮಾ.ಹ: ಇಲ್ಲ, ನಾನು ನನ್ನ ಗೆಳೆಯನಿಗೆ ಸಹಾಯಮಾಡಲಷ್ಟೇ ಹೋಗಿದ್ದೆ. ಇತರ ವಿಷಯಗಳಲ್ಲಿ ನನಗೆ ಆಸಕ್ತಿಯಿಲ್ಲ.

ನ್ಯಾ: ನೀನು ಜರ್ಮನ್ನರಿಂದ ನಿಯತವಾಗಿ ಪಡೆಯುತ್ತಿದ್ದ ಹಣದ ವಿಷಯ?

ಮಾ.ಹ: ನಾನು ಕೆಲವು ಜರ್ಮನ್ ಅಧಿಕಾರಿಗಳ ನಲ್ಲೆಯಾಗಿದ್ದೆ. ಹಾಗಾಗಿ ಅವರು ನನ್ನ ಲೈಂಗಿಕ ಸೇವೆಗಾಗಿ ಅವರು ಹಣ ಕಳುಹಿಸುತ್ತಿದ್ದರು.

ನ್ಯಾ: ಅಂದರೆ ವೇಶ್ಯೆಯಾಗಿ! ಗುಪ್ತ ಮಾಹಿತಿ ಪಡೆಯಲು ಅದು ಸುಲಭದ ದಾರಿ ಅಲ್ಲವೆ? ಅದೇ ರೀತಿ ಫ್ರೆಂಚ್ ಅಧಿಕಾರಿಗಳನ್ನೂ ಬಲೆಗೆ ಹಾಕಿಕೊಂಡಿದ್ದೆಯಾ?

ಮಾ.ಹ: ಹೌದು, ಏಕೆಂದರೆ ನನಗೆ ಸಮವಸ್ತ್ರದ ಅಧಿಕಾರಿಗಳೆಂದರೆ ಇಷ್ಟ, ಅವರು ಯಾವ ದೇಶದವರೆನ್ನುವುದು ನನಗೆ ಮುಖ್ಯವಲ್ಲ. ನನಗೆ ಅವರೊಂದಿಗೆ ಮೋಜಿನ ಸಮಯ ಕಳೆಯಬೇಕಿತ್ತು. ಅದಕ್ಕಿಂತ ಹೆಚ್ಚಿನದೇನೂ ಇಲ್ಲ, ಅವರೆಲ್ಲ ನನಗೆ ಯಾವುದೇ ರಹಸ್ಯ ಮಾಹಿತಿ ನೀಡಿಲ್ಲ ಸರ್.

ನ್ಯಾ: ಕೊನೆಯದಾಗಿ, ಬೆಲ್ಜಿಯಂನಲ್ಲಿ ಜರ್ಮನ್ನರಿಗೆ ಸಿಕ್ಕಿಹಾಕಿಕೊಂಡ ಫ್ರೆಂಚ್ ಏಜೆಂಟ್‌ನ ಬಗ್ಗೆ ನಿನ್ನ ವಿವರಣೆ ಏನು? ಅದು ನೀನು ಈ ದೇಶಕ್ಕೆ ಬಂದ ಕೆಲಸಮಯದ ನಂತರ ನಡೆಯಿತು. ನಂತರ ನೀನು ಯಾರಿಗೂ ತಿಳಿಯದಂತೆ ಬೆಲ್ಜಿಯಂನಿಂದ ಸ್ಪೇನಿಗೆ ಹೋದೆ. ಅದು ಸಂಶಯಾಸ್ಪದವೆಂದು ನೀನು ಒಪ್ಪಿಕೊಳ್ಳಲೇಬೇಕು.

ಮಾ.ಹ: ಇಲ್ಲ ಸರ್, ನಾನು ಬೆಲ್ಜಿಯಂನಿಂದ ಹೋಗಬಯಸಿದ್ದೆ. ಅದಕ್ಕಾಗಿ

ನಾನು ಅಲ್ಲಿಂದ ಹೋದೆ. ಬೇರೆ ನನಗೇನೂ ತಿಳಿದಿಲ್ಲ. ನಾನು ನಿರಪರಾಧಿ.

ನ್ಯಾ: ವಂದನೆಗಳು, ಅಷ್ಟು ಸಾಕು.

ಅಷ್ಟೇ ಮಾತಾ ಹರಿ ಅಲಿಯಾಸ್ ಮಾರ್ಗರೆಟ್ ಜೆಟ್ರೂಡ್ ಝೆಲ್ಲೆಯ ವಿಚಾರಣೆ ನಡೆದದ್ದು. ಖಾಸಗಿ ಕೋಣೆಯಲ್ಲಿ ಹತ್ತು ನಿಮಿಷ ವಿಚಾರ ವಿನಿಮಯ ಮಾಡಿಕೊಂಡ ನ್ಯಾಯಾಧೀಶರು ನಂತರ ಹೊರಬಂದು ಮಾತಾ ಹರಿಗೆ ಈ ಮೊದಲೇ ನಿರ್ಧರಿಸಿದ್ದಂತೆ ಮರಣದಂಡನೆ ಶಿಕ್ಷೆ ವಿಧಿಸಿದರು. 1917ರ ಅಕ್ಟೋಬರ್ 15ರಂದು ಆಕೆಯನ್ನು ಗುಂಡಿಟ್ಟು ಕೊಲ್ಲಲಾಯಿತು. ಬಂದೂಕುಧಾರಿಗಳನ್ನು ನೋಡಲು ಹೆದರಬಹುದೆಂದು ಆಕೆಯ ಕಣ್ಣಿಗೆ ಬಟ್ಟೆ ಕಟ್ಟುತ್ತೇನೆಂದರೂ ಬೇಡವೆಂದ ಆಕೆ ತನ್ನನ್ನು ಕೊಲ್ಲಲು ಎದುರುನಿಂತಿದ್ದ ಬಂದೂಕುಧಾರಿಗಳಿಗೆ ಗಾಳಿಯಲ್ಲಿ ಚುಂಬನ ಹಾರಿ ಬಿಟ್ಟು ಎದೆಯೊಡ್ಡಿ ನಿಂತಳು.

ಮಾತಾ ಹರಿಯ ಬದುಕು ನಿಗೂಢಗಳಿಂದ ತುಂಬಿದೆ. ಆಕೆ ಗೂಢಚಾರಳಾಗಿದ್ದಳೇ ಎನ್ನುವುದು ಇಂದಿಗೂ ತಿಳಿದುಬಂದಿಲ್ಲ. ಮೊದಲನೆಯ ವಿಶ್ವಯುದ್ಧದ ಸಮಯದಲ್ಲಿ ಆಕೆಯ ಐಶಾರಾಮಿ ಬದುಕು, ಅವಳ 'ಗೆಳೆಯರ ವೃಂದ', 'ವ್ಯಭಿಚಾರದ' ಬದುಕು ಅವಳನ್ನು ಗುಮಾನಿಯಾಗಿ ನೋಡುವಂತಿತ್ತು. ಫ್ರೆಂಚ್ ಅಧಿಕಾರಿಗಳಿಗೆ ಅಷ್ಟೇ ಸಾಕಾಗಿತ್ತು. ರಾಷ್ಟ್ರಪತಿಯವರಿಗೆ ಸಲ್ಲಿಸಿದ್ದ ಅವಳ 'ದಯೆ ಕೋರಿಕೆ' ಅರ್ಜಿಯನ್ನೂ ಮನ್ನಿಸದೆ ಅವಳನ್ನು ಕೊಲ್ಲಲಾಯಿತು. ಆಕೆಯನ್ನು ವಿಚಾರಣೆಗೆ ಒಳಪಡಿಸಿದ ಅಧಿಕಾರಿ ಕ್ಯಾಪ್ಟನ್ ಬೋಷಾರ್ಡನ್, 'ಆಕೆಯ ಬಹುಭಾಷಾ ಚಾತುರ್ಯ, ಅಸಂಖ್ಯಾತ ಸಂಪರ್ಕಗಳು, ಅದ್ವಿತೀಯ ಬುದ್ಧಿಶಕ್ತಿ ಮತ್ತು ಆಂತರಿಕ ಅಥವಾ ರೂಢಿಸಿಕೊಂಡ ಅನೈತಿಕತೆ ಎಲ್ಲವೂ ಆಕೆಯನ್ನು ಗುಮಾನಿಯಾಗಿ ನೋಡುವಂತೆ ಮಾಡುತ್ತವೆ. ಯಾವುದೇ ಧರ್ಮಭೀತಿಯಿಲ್ಲದೆ ಗಂಡಸರನ್ನು ಹೇಗೆ ಬಳಸಿಕೊಳ್ಳಬೇಕೆಂದು ತಿಳಿದಿರುವ ಆಕೆ ಗೂಢಚಾರಳಾಗಲೆಂದೇ ಹುಟ್ಟಿರುವ ಹೆಂಗಸು' ಎಂದು ಹೇಳಿದ್ದ. ಆಕೆ ಸತ್ತ ಹದಿನೈದು ವರ್ಷಗಳ ನಂತರ ಯುದ್ಧದ ದಿನಗಳ ಬಗ್ಗೆ ಮಾತನಾಡುವಾಗಲೂ ಆತ ಆಕೆಯ ಯಾವುದೇ ಬೇಹುಗಾರಿಕೆ ಕಾರ್ಯವನ್ನು ತೋರಿಸಲು ವಿಫಲನಾಗಿದ್ದ. ಆಕೆಯ ಬದುಕಿನ ಬಗ್ಗೆ ಎಲ್ಲ ಮಾಹಿತಿಯನ್ನೂ ಕಲೆಹಾಕಿ ಅಧ್ಯಯನ ನಡೆಸಿದ ಪಾಲ್ ಅಲರ್ಡ್ ಎಂಬಾತ, 'ಪ್ರಖ್ಯಾತ ನರ್ತಕಿ–ಗೂಢಚಾರಿ ಮಾತಾ ಹರಿಯ ಬಗೆಗಿನ ಎಲ್ಲ ಮಾಹಿತಿಯನ್ನೂ ಅಧ್ಯಯನ ನಡೆಸಿದ್ದೇನೆ. ಆದರೆ ಆಕೆಯ ಬೇಹುಗಾರಿಕೆಯ ಕಾರ್ಯವೇನೆಂಬುದು ನನಗಿನ್ನೂ ತಿಳಿದಿಲ್ಲ. ವಾಸ್ತವಾಂಶವೆಂದರೆ ನನಗಷ್ಟೇ ಅಲ್ಲ, ಬೇರ್‍ಯಾರಿಗೂ ಸಹ ತಿಳಿದಿಲ್ಲ! ಸಾಮಾನ್ಯ

ಫ್ರೆಂಚ್‌ನವನನ್ನು ಕೇಳಿ ಅಥವಾ ಅತ್ಯಂತ ಬುದ್ಧಿಶಾಲಿ ಫ್ರೆಂಚ್‌ನವನನ್ನು ಕೇಳಿ ಮಾತಾ ಹರಿಯ ಅಪರಾಧವೇನೆಂಬುದನ್ನು. ನಿಮಗೆ ಉತ್ತರವೇ ಸಿಗುವುದಿಲ್ಲ. ಅವರೆಲ್ಲ ಆಕೆ ಅಪರಾಧಿಯಂದಷ್ಟೇ ಹೇಳುತ್ತಾರೆ' ಎಂದು ಹೇಳಿದ್ದಾನೆ.

ಬದುಕಿನಲ್ಲಿ ವೈಯಕ್ತಿಕವಾಗಿ ಧಾರುಣ ದುರಂತಗಳನ್ನು ಕಂಡ ಮಾತಾ ಹರಿ ಸಾವಿನಲ್ಲೂ ದುರಂತ ಕಂಡವಳು. ಲೆಕ್ಕವಿಡದಷ್ಟು ಇನಿಯರನ್ನು ಹೊಂದಿದ್ದ ಆಕೆಯ ದೇಹವನ್ನು ಸತ್ತ ಮೇಲೆ ಪಡೆಯಲು ಯಾರೂ ಮುಂದೆ ಬರಲಿಲ್ಲ. ಆಕೆಯ ದೇಹವನ್ನು ವಿಧ್ಯಾರ್ಥಿಗಳ ಅಧ್ಯಯನಕ್ಕೆಂದು ವೈದ್ಯಕೀಯ ಶಾಲೆಗೆ ನೀಡಲಾಯಿತು. ಆಕೆಯ ತಲೆಯನ್ನು ಎಲ್ಲ ಪ್ರಖ್ಯಾತ ಅಪರಾಧಿಗಳ ತಲೆಯಂತೆ ಕತ್ತರಿಸಿ ಪ್ಯಾರಿಸ್ಸಿನ 'ಮೆಕಾಬರ್' ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿತ್ತು. ಎರಡನೇ ವಿಶ್ವಯುದ್ಧದ ಸಮಯದಲ್ಲಿ ಆ ತಲೆಯೂ ನಿಗೂಢವಾಗಿ ಮಾಯವಾಯಿತು.

ಮಾತಾ ಹರಿಯ ಹೆಸರು ಬೇಹುಗಾರಿಕೆ, ಗೂಢಚರ್ಯೆ, ನಿಗೂಢತೆ ಹಾಗೂ 'ಸೆನ್ಸುಯಾಲಿಟಿ'ಯೊಂದಿಗೆ ಸೇರಿಹೋಗಿದೆ (ಈ ಇಂಗ್ಲಿಷಿನ sensuous ಪದಕ್ಕೆ ಕನ್ನಡದ ಪಾರಿಭಾಷಿಕ ಪದವೇ ಇಲ್ಲವೆನ್ನಬಹುದು. ನಿಘಂಟುಗಳು ಇಂದ್ರಿಯ ಗ್ರಾಹ್ಯ, ಇಂದ್ರಿಯಗಳ ಮೇಲೆ ಪರಿಣಾಮ ಬೀರುವ, ಇಂದ್ರಿಯಗತ ಎಂದಷ್ಟೇ ಹೇಳುತ್ತವೆ. ಆದರೆ ಅದರ ಅರ್ಥ ಈ ಪದಗಳ ವ್ಯಾಖ್ಯಾನವನ್ನೂ ಮೀರಿದುದು). ಮಾತಾ ಹರಿ ತನ್ನೆಲ್ಲ ಬದುಕಿನ ವೈಯಕ್ತಿಕ ದುರಂತಗಳಿಗೆ ಪರದೆ ಮುಚ್ಚಿ ತನ್ನ ದೇಹದ ಮೇಲಿನ ವಸ್ತ್ರ ಪರದೆಗಳನ್ನು ಒಂದೊಂದಾಗಿ ಜನರೆದುರು ತೆರೆದು ಅವರನ್ನು ಮೋಹಕಗೊಳಿಸಿದವಳು. ಅವಳು ಭಾರತವನ್ನೇ ನೋಡಿಲ್ಲದಿದ್ದರೂ ತಾನೊಬ್ಬ ಬ್ರಾಹ್ಮಣ ಪೂಜಾರಿಯ ಹಾಗೂ ಕಾಳಿ ದೇವಿಯ ದೇವಸ್ಥಾನದ ದೇಗುಲ ನರ್ತಕಿಯ ಮಗಳೆಂದು ಹೇಳಿಕೊಂಡವಳು. ತಾನು ಮಾಡುತ್ತಿದ್ದ 'ಕ್ಯಾಬರೆ' ನೃತ್ಯವನ್ನೇ ಶಿವನ ಆರಾಧನೆಯ ನೃತ್ಯವೆಂದು ಹೇಳಿ ಭಾರತವೆಂದರೆ ನಿಗೂಢ ದೇಶ, ಅಲ್ಲಿರುವುದೆಲ್ಲ ಅದ್ಭುತ ಎಂದು ನಂಬಿದ್ದ ಯೂರೋಪಿಯನ್ ಜನರನ್ನು ಮರುಳುಗೊಳಿಸಿದವಳು.

ಮಾತಾ ಹರಿಯ ನಿಜವಾದ ಹೆಸರು ಮಾರ್ಗರೇತಾ ಜೆಟ್ರೂಡ್ ಝೆಲ್ಲೆ ಆಕೆ ಆಡಂ ಝೆಲ್ಲೆ ಮತ್ತು ಆತನ ಪತ್ನಿ ಆಂಟೆ ವಾನ್ ಡರ್ ಮ್ಯೂಲೆನ್‌ರವರ ಒಬ್ಬಳೇ ಮಗಳು. ಆಕೆಗೆ ಮೂರು ಜನ ಸೋದರರಿದ್ದರು. ಆಕೆ ಹಾಲೆಂಡಿನ ಲ್ಯೂವಾರ್ಡನ್‌ನಲ್ಲಿ 1876ರ ಆಗಸ್ಟ್ 7ರಂದು ಜನಿಸಿದಳು. ಎಲ್ಲರೂ ಅವಳನ್ನು ಪ್ರೀತಿಯಿಂದ ಮಾಗ್ರೀಟ್ ಎಂದು ಕರೆಯುತ್ತಿದ್ದರು. ಹೊಂಬಣ್ಣದ ಕೂದಲು ಮತ್ತು ಚರ್ಮ ಹಾಗೂ ನೀಲ ಕಣ್ಣುಗಳಿಗೆ ಪ್ರಸಿದ್ಧವಾಗಿದ್ದ ಕುಟುಂಬ ಹಾಗೂ



ಸಮಾಜದಲ್ಲಿ ಮಾಗ್ರೀಟ್ ತನ್ನ ಹುಲುಸಾದ ಕಪ್ಪು ಕೂದಲು, ಹೊಳೆಯುವ ಕಪ್ಪು ಕಣ್ಣುಗಳಿಂದ ಮತ್ತು ನಸುಕಂದು ಚರ್ಮದಿಂದಾಗಿ ಎದ್ದು ಕಾಣುವಂತಿದ್ದಳು. ಅವಳಲ್ಲಿ ಯೆಹೂದಿಗಳ ಅಥವಾ ಜಾವಾದ ರಕ್ತ ಹರಿಯುತ್ತಿದೆಯೆಂದು ಅಕ್ಕಪಕ್ಕದವರು ನಂಬಿದ್ದರು. ಆಗಿನ ಜಾವಾ ಡಚ್ ಈಸ್ಟ್ ಇಂಡೀಸ್‌ನ ಭಾಗವಾಗಿದ್ದುದೂ ಆ ರೀತಿಯ ಅನಿಸಿಕೆಗೆ ಕಾರಣವಾಗಿತ್ತು.

ಆಗ ತಲೆಯ ಮೇಲೆ ಟೊಪ್ಪಿಗೆಗಳಿಲ್ಲದೆ ಯಾರೂ ಓಡಾಡುತ್ತಿರಲಿಲ್ಲ–ವಾದುದರಿಂದ ಆಡಂ ಝೆಲ್ಲೆಯ ಟೊಪ್ಪಿಗೆ ವ್ಯಾಪಾರ ಬಹಳ ಚೆನ್ನಾಗಿಯೇ ನಡೆಯುತ್ತಿತ್ತು ಹಾಗೂ ಆತ ತನ್ನ ಕುಟುಂಬವನ್ನು ಸುಖ ಸಂತೋಷಗಳಲ್ಲಿಯೇ ಇರಿಸಿದ್ದ. ಮಾಗ್ರೀಟ್‌ಳ ಆರನೇ ಹುಟ್ಟುಹಬ್ಬಕ್ಕೆ ಆತ ತನ್ನ ಕೈಯಿಂದಲೇ ತಯಾರಿಸಿದ, ಮೇಕೆಗಳು ಎಳೆಯಬಲ್ಲಂತಹ ಒಂದು ಪುಟ್ಟ ಗಾಡಿಯನ್ನು ತಯಾರಿಸಿಕೊಟ್ಟಿದ್ದ. ಅದರಲ್ಲಿ ನಾಲ್ಕು ಜನ ಕೂತುಕೊಳ್ಳಲು ಸಾಧ್ಯವಾಗುವಂತಿದ್ದು ಆಕೆ ತನ್ನ ಗೆಳೆಯರಿಗೆಲ್ಲ ಸವಾರಿ ಮಾಡಿಸುತ್ತಿದ್ದಳು.

ಬಾಲ್ಯದಿಂದಲೇ ಮಾಗ್ರೀಟ್ ಬಡಾಯಿ ಕೊಚ್ಚಿಕೊಳ್ಳುವವಳಾಗಿದ್ದಳು. ಶಾಲೆಗೆ ಬಣ್ಣಬಣ್ಣದ ಬಟ್ಟೆಗಳನ್ನು ಧರಿಸಿ ತನ್ನ ಹುಟ್ಟಿನ ಬಗ್ಗೆ ಕಲ್ಪಿತ ಕತೆಗಳನ್ನು ಹೇಳಿಕೊಳ್ಳುತ್ತಿದ್ದಳು. ಲ್ಯೂವಾರ್ಡನ್–ನಲ್ಲಿದ್ದ ಕ್ಯಾಮಿಂಗಾಸ್ಟೇಟ್ ಅರಮನೆ ಯಲ್ಲಿ ತನ್ನ ಬಾಲ್ಯವನ್ನು ಕಳೆದದ್ದಾಗಿ ಹೇಳುತ್ತಿದ್ದಳು. ಅವಳ ಹೇಳಿಕೆಗಳೆಲ್ಲಾ ಸುಳ್ಳೆಂದು ತಿಳಿದಿದ್ದರೂ, ಭಾಷೆಯ ಕಲಿಕೆಯಲ್ಲಿ ಆಕೆಯ ಜಾಣ್ಮೆಯಿಂದಾಗಿ ಆಕೆ ಜನಪ್ರಿಯಳಾಗಿದ್ದಳು.

ಮಾಗ್ರೀಟ್‌ಳಿಗೆ ಹದಿಮೂರು ವರ್ಷವಾಗಿದ್ದಾಗ ಅಕೆಯ ಕುಟುಂಬಕ್ಕೆ ದುರಂತವೆರಗಿತು. ಸ್ಟಾಕ್ ಮಾರ್ಕೆಟ್ಟಿನಲ್ಲಿ ಆಕೆಯ ತಂದೆ ಎಲ್ಲ ಹಣವನ್ನು ಕಳೆದುಕೊಂಡ. ಮನೆ, ಪೀಠೋಪಕರಣ ಎಲ್ಲ ಮಾರಿದ ಝೆಲ್ಲೆ ಕುಟುಂಬ ಬಡವರು ವಾಸಿಸುವ ಪ್ರದೇಶದಲ್ಲಿ ಒಂದು ಪುಟ್ಟ ಶೆಡ್‌ನಂತಹ ಮನೆಯಲ್ಲಿ ವಾಸಿಸತೊಡಗಿದರು. ಆಮ್‌ಸ್ಟರ್‌ಡ್ಯಾಂಗೆ ಹಣ ಸಂಪಾದಿಸಲು ಹೋಗುವುದಾಗಿ

ಹೇಳಿ ನಾಲ್ಕು ಮಕ್ಕಳನ್ನು ಸಾಕುವ ಹೊಣೆಗಾರಿಕೆ ತಾಯಿಗೆ ವಹಿಸಿ ಆತ ಹೊರಟುಹೋದ. ಈ ಜವಾಬ್ದಾರಿ ತಾಯಿ ಆಂಟ್ಜೆಗೆ ಅತಿಯಾದ ಹೊರೆಯಾಗಿತ್ತು. ಕೆಲದಿನಗಳಲ್ಲೇ ಮಾನಸಿಕ ಖಿನ್ನತೆಗೆ ಒಳಗಾದ ಆಕೆ ದೈಹಿಕವಾಗಿಯೂ ಕಾಯಿಲೆಗೆ ಒಳಗಾದಳು. ಮಾಗ್ರೀಟ್‌ಳಿಗೆ ಹದಿನೈದು ವರ್ಷ ವಯಸ್ಸಾಗಿದ್ದಾಗ ಆಕೆಯೂ ತೀರಿಕೊಂಡಳು. ಮಾಗ್ರೀಟ್ 'ತಂದೆಯ ಮಗಳು' ಆಗಿದ್ದರೂ ತಾಯಿಯನ್ನೂ ಹೆಚ್ಚು ಹಚ್ಚಿಕೊಂಡಿದ್ದಳು. ತಾಯಿಯ ಸಾವು ಅವಳ ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿತು. ಅಂತ್ಯಕ್ರಿಯೆಗೆ ಅಪ್ಪ ಆಡಂ ಬಂದರೂ ಆತ ಮಕ್ಕಳ ಹೊಣೆಗಾರಿಕೆ ಹೊರಲು ಸಿದ್ಧವಿರಲಿಲ್ಲ. ಸಂಬಂಧಿಕರನ್ನು ಕಾಡಿಬೇಡಿ ಜವಾಬ್ದಾರಿಯನ್ನು ಅವರಿಗೆ ವಹಿಸಿ ತನ್ನ ಮಕ್ಕಳನ್ನು ಹಂಚಿಬಿಟ್ಟ. ಮಾಗ್ರೀಟ್ ಸಣ್ಣ ಪಟ್ಟಣವಾದ ಸ್ನೀಕ್‌ನಲ್ಲಿನ ತನ್ನ ಸಂಬಂಧಿಕ ಹೀರ್ ವಿಸೆರ್‌ವರ ಮನೆಗೆ ಹೋದಳು. ಆ ವೇಳೆಗಾಗಲೇ ಮಾಗ್ರೀಟ್ ಐದು ಅಡಿ ಹತ್ತು ಅಂಗಲ ಎತ್ತರವಿದ್ದು ತನ್ನದೇ ವಯಸ್ಸಿನ ಇತರ ಹುಡುಗಿಯರಿಗಿಂತ ಎತ್ತರವಿದ್ದು ಎದ್ದು ಕಾಣುತ್ತಿದ್ದಳು. ಅಲ್ಲದೆ ಅವಳ ಎತ್ತರ ಸಾಧಾರಣ ಡಚ್ ಗಂಡಸಿಗಿಂತ ಎತ್ತರವಿದ್ದುದರಿಂದ ಅವಳ ಮದುವೆಗೆ ಗಂಡು ಸಿಗುವುದು ಕಷ್ಟಕರವೆಂದು ಜನ ಮಾತಾಡಿಕೊಳ್ಳುತ್ತಿದ್ದರು.



ಆಕೆಯ ಸಂಬಂಧಿ ಹೀರ್ ವಿಸೆರ್ ಕೆಲದಿನಗಳ ನಂತರ ಆಕೆಗೆ ಕಿಂಡರ್ ಗಾರ್ಟನ್ ಶಿಕ್ಷಕಿಯ ತರಬೇತಿ ಪಡೆಯಲು ಸೂಚಿಸಿದ. ಆಕೆಗೆ ಆತನ ಮಾತು ಅರ್ಥವಾಯಿತು. ಅವರ ಮನೆಯಲ್ಲಿ ದಾನದ ಊಟ ಮಾಡಿಕೊಂಡಿರಲು ಆಕೆಗೆ ಇಷ್ಟವಾಗಲಿಲ್ಲ. ಲೀಡೆ ನಗರದಲ್ಲಿ ಹೀರ್ ವೈಬ್ರಾಂಡಸ್ ಎಂಬಾತ ನಡೆಸುವ ಶಿಕ್ಷಕರ ತರಬೇತಿ ಶಾಲೆಗೆ ಸೇರಿದಳು. ಅಲ್ಲಿ ಠೊಣಪ ವೈಬ್ರಾಂಡಸ್‌ನ ಕಣ್ಣು ಮಾಗ್ರೀಟ್‌ಳ ಮೇಲೆ ಬಿತ್ತು. ಮಾಗ್ರೀಟ್‌ಳೂ ಸಹ ಅದಕ್ಕೆ ಪ್ರತಿಕ್ರಿಯಿಸಿದಳೆನ್ನಿಸುತ್ತದೆ, ಆದರೆ ಇಡೀ ಊರೆಲ್ಲಾ ಅದೇ ಸುದ್ದಿಯಾಯಿತು. ಆದರೆ ದೂಷಣೆಯ ಕೇಂದ್ರವಾದದ್ದು ಹಿರಿಯ ಯಜಮಾನ ಗಂಡಸಲ್ಲ ಬದಲಿಗೆ ಒಂಟಿಯಾಗಿದ್ದ, ಅಸಹಾಯಕ ಮಾಗ್ರೀಟ್. ಅಪಮಾನದಿಂದ ಮಾಗ್ರೀಟ್ ಆ

ಶಾಲೆ ತೊರೆಯಬೇಕಾಯಿತು.

ಹೇಗ್ ನಗರದಲ್ಲಿದ್ದ ತನ್ನ ಸಂಬಂಧಿ ಹೀರ್ ಟಕೋನಿಸ್‌ನಲ್ಲಿ ಆಸರೆ ಕೋರಿದಳು. ಅಲ್ಲಿ ಅವರ ಮನೆಯಲ್ಲಿ ಅವರು ಹಾಕುವ ಅನ್ನಕ್ಕೆ ಪ್ರತಿಯಾಗಿ ಮನೆಗೆಲಸ ಮಾಡಿಕೊಂಡು ಇರುತ್ತಿದ್ದಳು. ಅವಳಿಗೆ ವಯಸ್ಸು ಹದಿನೆಂಟಾಗುತ್ತಿತ್ತು, ಮದುವೆಯ ಆಲೋಚನೆಯೂ ಬರುತ್ತಿತ್ತು. ಗಂಡಸನ್ನು ಆಕರ್ಷಿಸಲು ಆಕೆಯಲ್ಲಿ ಎರಡು 'ನ್ಯೂನತೆ'ಗಳಿದ್ದವು. ಮೊದಲನೆಯದು, ಆಕೆಯ ಎತ್ತರ. ಈಗಿನಂತೆ ಆಗಿನ ಗಂಡಸರೂ ಸಹ ತಮಗಿಂತ ಎತ್ತರದಲ್ಲಿ ಕಡಿಮೆ ಇರುವ ಹೆಣ್ಣನ್ನು ಬಯಸುತ್ತಿದ್ದರು. ಎರಡನೆಯದು, ಆಕೆಯ ಮೊಲೆಗಳ ಗಾತ್ರ ತೀರಾ ಚಿಕ್ಕದಾಗಿದ್ದುದು. ಎರಡನೆಯ ನ್ಯೂನತೆಯನ್ನು ಆಕೆಯೇ ಒಳಉಡುಪಿನೊಳಗೆ ಸ್ಟಾಕಿಂಗ್ಸ್ ತುರುಕಿಕೊಂಡು ಸರಿಪಡಿಸಿಕೊಳ್ಳಲು ಪ್ರಯತ್ನಿಸಿದಳು. ಆದರೂ ಮಾಗ್ರೀಟ್‌ಳು ಸುಂದರವಾಗಿಯೇ ಇದ್ದಳು, ಅವಳಲ್ಲಿ ವಿಲಕ್ಷಣದ 'ಎಕ್ಸೋಟಿಕ್' ಸೌಂದರ್ಯವಿತ್ತು, ನಯ ನಾಜೂಕಿತ್ತು. ಹಾಗಾಗಿ ಒಮ್ಮೆ ನೋಡಿದ ಗಂಡಸರು ಮತ್ತೊಮ್ಮೆ ತಿರುಗಿ ನೋಡುವಂತೆಯೇ ಇದ್ದಳು.

೨

ಅದೊಂದು ದಿನ ವೃತ್ತ ಪತ್ರಿಕೆಯಲ್ಲಿನ ಜಾಹೀರಾತೊಂದು ಮಾಗ್ರೀಟ್‌ಳ ಕಣ್ಣಿಗೆ ಬಿತ್ತು: 'ಡಚ್ ಈಸ್ಟ್ ಇಂಡೀಸ್‌ನಲ್ಲಿರುವ, ಈಗ ರಜೆಯಲ್ಲಿ ಇಲ್ಲಿಗೆ ಬಂದಿರುವ ಅಧಿಕಾರಿಯೊಬ್ಬರು ಉತ್ತಮ ಗುಣಗಳ ಹುಡುಗಿಯನ್ನು ಭೇಟಿಯಾಗಲು ಬಯಸುತ್ತಾರೆ ಹಾಗೂ ಒಪ್ಪಿಗೆಯಾದಲ್ಲಿ ಮದುವೆಯಾಗಲು ಬಯಸುತ್ತಾರೆ.' ಈ ಜಾಹಿರಾತನ್ನು ರುಡಾಲ್ಫ್ ಮ್ಯಾಕ್‌ಲಿಯೋಡ್ ಎಂಬಾತನ ಗೆಳೆಯ ರುಡಾಲ್ಫ್ ಪರವಾಗಿ ಆತನಿಗೆ ತಿಳಿಯದೇ ನೀಡಿದ್ದ. ರುಡಾಲ್ಫ್ ಡಚ್ ಮಿಲಿಟರಿಯಲ್ಲಿ ಸೇವೆ ಸಲ್ಲಿಸುವ 38 ವರ್ಷದ ಒಬ್ಬ ಅಧಿಕಾರಿ. ಯುದ್ಧದಲ್ಲಿ ಆತನ ಶೌರ್ಯಕ್ಕಾಗಿ 'ಆಫೀಸರ್ಸ್ ಕ್ರಾಸ್' ಪದಕವನ್ನೂ ಪಡೆದಿದ್ದ. ಆತ ಬಲಿಷ್ಠ, ಅಜಾನುಬಾಹು ಹಾಗೂ ದಪ್ಪ ಮೂಗಿನ ವ್ಯಕ್ತಿಯಾಗಿದ್ದ. ಆತನಿಗೆ ಹುಬ್ಬುಗಳ ನಡುವೆ ಗಂಟೊಂದಿತ್ತು ಹಾಗೂ ದಪ್ಪನೆ ಬಿಳಿಯ ಮೀಸೆಯಿದ್ದು ಅದನ್ನು ಕೊನೆಗಳಲ್ಲಿ ಸುರುಳಿ ಸುತ್ತಲಾಗಿತ್ತು. ಆತನಿಗೆ ಸಕ್ಕರೆ ಹಾಗೂ ಕೀಲುನೋವಿನ ಕಾಯಿಲೆಯಿದ್ದು ವಯಸ್ಸಾದವನಂತೆ ಕಾಣುತ್ತಿದ್ದ. ಈ ಕಾಯಿಲೆಗಳಿಂದಾಗಿ ಆತನಿಗೆ ಹಾಲೆಂಡಿಗೆ ವರ್ಗ ಮಾಡಲಾಗಿತ್ತು. ಆತನ ಪೂರ್ವಜರು ಸ್ಕಾಟ್‌ಲ್ಯಾಂಡಿನಿಂದ ನೆದರ್‌ಲ್ಯಾಂಡಿಗೆ ವಲಸೆಬಂದವರಾಗಿದ್ದರು. ಮಾಗ್ರೀಟ್ ಆ ಜಾಹೀರಾತು ನೋಡಿ



ರುಡಾಲ್ಫ್‌ನನ್ನು ಭೇಟಿಯಾಗಲು ನಿರ್ಧರಿಸಿದಳು. ತಾನು ಆ ಜಾಹೀರಾತು ಕೊಟ್ಟಿರದಿದ್ದರೂ ತನ್ನ ಗೆಳೆಯನ ಒತ್ತಾಯದ ಮೇರೆಗೆ ಅದುವರೆಗೂ ಅವಿವಾಹಿತನಾಗಿದ್ದ ರುಡಾಲ್ಫ್ ಸಹ ಮಾಗ್ರೀಟ್‌ಳನ್ನು ಭೇಟಿಯಾಗಲು ಒಪ್ಪಿದ. ಅವರಿಬ್ಬರ ನಡುವೆ ಇಪ್ಪತ್ತು ವರ್ಷಗಳ ಅಂತರವಿದ್ದರೂ ಇಬ್ಬರೂ ಮದುವೆಯಾಗಲು ಸಮ್ಮತಿಸಿದರು. ಬಹುಶಃ ಆಕೆ ಒಮ್ಮೆ ಹೇಳಿಕೊಂಡಂತೆ ಆಕೆ ಮಿಲಿಟರಿ ಸಮವಸ್ತ್ರದ ಆಕರ್ಷಣೆಗೆ ಒಳಗಾಗಿದ್ದಳು. ಅಲ್ಲದೆ ರುಡಾಲ್ಫ್ ಬಹಳ ಹೆಮ್ಮೆಯಿಂದ ತನ್ನ ಎಲ್ಲ ಮೆಡಲುಗಳನ್ನು ವೈಭವೋಪೇತವಾಗಿ ಧರಿಸಿದ್ದ.

ಆದರೆ ಹೊಸ ಸಮಸ್ಯೆಯೊಂದು ಉದ್ಭವಿಸಿತು. ಹಾಲೆಂಡಿನ ಆಗಿನ ಕಾನೂನಿನಂತೆ ಹದಿನಾರು ವರ್ಷದ ಹುಡುಗಿ ತನ್ನ ತಂದೆ ತಾಯಿಯರ ಸಮ್ಮತಿ ಪಡೆದು ಮದುವೆಯಾಗಬಹುದಿತ್ತು; ಸಮ್ಮತಿಯಿಲ್ಲದಿದ್ದಲ್ಲಿ ಆಕೆ ಮುವ್ವತ್ತು ವರ್ಷ ವಯಸ್ಸಾಗುವವರೆಗೂ ಮದುವೆಯಾಗುವಂತಿರಲಿಲ್ಲ. ತನ್ನ ತಂದೆ ಇದ್ದ ಹೀನಾಯ ಸ್ಥಿತಿಯನ್ನು ಹೇಳಿಕೊಳ್ಳಲಾಗದೆ ಆಕೆ ರುಡಾಲ್ಫನಿಗೆ ತನ್ನ ತಂದೆ ತಾಯಿಯರಿಬ್ಬರೂ ಸತ್ತುಹೋಗಿರುವರೆಂದೇ ಹೇಳಿದ್ದಳು. ತನ್ನ ಮದುವೆಗೆ ಇನ್ನೂ ಹನ್ನೆರಡು ವರ್ಷ ಕಾಯುವಂತಹ ಮನಸ್ಥಿತಿಯಲ್ಲಿಲ್ಲದ ಆಕೆ ಈಗ ನಿಜವನ್ನೇ ಹೇಳಬೇಕಾಯಿತು. ಆದಂ ಝೆಲ್ಲೆ ತನ್ನ ಮಗಳ ಮದುವೆಗೆ ಒಪ್ಪಿಗೆ ಕೊಟ್ಟ. ಮೂರು ತಿಂಗಳ ನಂತರ ಮದುವೆಯೆಂದು ನಿರ್ಧರಿಸ ಲಾಯಿತು.

ಇದು ಊರೆಲ್ಲ ಸುದ್ದಿ-ಯಾಯಿತು. ಈ ರೀತಿಯ ಆತುರಾತುರದ ಮದುವೆಯ ಹಿಂದೆ ಏನೋ ಸಂಗತಿಯಿರಬೇಕೆಂದು ಕೊಂಡ ಜನ ಮದುವೆಯ ನಂತರ ಮಗು ಹೆರಲು ಮಾಗ್ರೀಟ್ ಒಂಭತ್ತು ತಿಂಗಳು ಕಾಯಲೇಬೇಕಿಲ್ಲ ಎಂದು ಹೇಳಿಕೊಳ್ಳತೊಡಗಿದರು. ಆದರೆ ಜನರ ನಂಬಿಕೆ ತಪ್ಪಾಗಿತ್ತು. ರುಡಾಲ್ಫ್ ಮತ್ತು ಮಾಗ್ರೀಟ್‌ಳ ಮದುವೆ 1895ರ ಜುಲೈ 11ರಂದು ನಡೆದರೂ ಅವರ ಮೊದಲ ಮಗು ನಾರ್ಮನ್ ಜಾನ್ ಹುಟ್ಟಿದ್ದು 1897ರ ಜನವರಿ 30ರಂದು.

ತನ್ನ ಬಡತನದಿಂದ ಬಿಡುಗಡೆಹೊಂದಲು ಬಯಸಿದ್ದ ಮಾರ್ಗ್ರೀಟ್‌ಳಿಗೆ ಮತ್ತೊಂದು ಯಾತನೆ ಆರಂಭವಾಗಿತ್ತು. ಮದುವೆಯ ನಂತರವೂ ರುಡಾಲ್ಫ್ ತನ್ನ ಅವಿವಾಹಿತ ದಿನಗಳಂತಹ ಬದುಕನ್ನು ಬಿಡಲಿಲ್ಲ. ದಿನ ರಾತ್ರಿ ಕುಡಿದು, ಹಲವಾರು ಹೆಂಗಸರ ಸಹವಾಸದೊಂದಿಗೆ ಮನೆಯ ಹೊರಗೇ ಇರುತ್ತಿದ್ದ, ಹೊತ್ತಲ್ಲದ ಹೊತ್ತಲ್ಲಿ ಮನೆಗೆ ಬರುತ್ತಿದ್ದ. ತನ್ನ ಪತ್ನಿಯನ್ನೇ ಸಂಶಯದಿಂದ ನೋಡಲಾರಂಭಿಸಿದ. ಗಂಡನ ಕಚ್ಚೆಹರುಕತನ, ಕುಡುಕತನ ಎಲ್ಲವನ್ನೂ ಸಹಿಸಿಕೊಂಡಿದ್ದರೂ, ಯಾರಾದರೂ ಗಂಡಸರು ಅವಳೊಂದಿಗೆ ಮಾತನಾಡಿದರೆ ತೀವ್ರ ಅಸೂಯೆಗೊಳಗಾಗುತ್ತಿದ್ದ, ಮಾರ್ಗ್ರೀಟ್‌ಳನ್ನು ದನ ಬಡಿದಹಾಗೆ ಬಡಿಯುತ್ತಿದ್ದ. ಅವಳು ತುಂಬು ಗರ್ಭಿಣಿಯಾಗಿರುವಾಗಲೂ ಅವಳನ್ನು ಹೊಡೆಯುವುದನ್ನು ಬಿಡಲಿಲ್ಲ.

ಒಂದು ದಿನ ತನಗೆ ಜಾವಾ ದ್ವೀಪಗಳಿಗೆ ವರ್ಗವಾಯಿರುವುದರಿಂದ ಕುಟುಂಬವನ್ನು ಅಲ್ಲಿಗೇ ಸಾಗಿಸೋಣವೆಂದು ರುಡಾಲ್ಫ್ ತಿಳಿಸಿದ. ಮಾರ್ಗ್ರೀಟ್‌ಳಿಗೆ ಸಂತೋಷವೇ ಆಯಿತು. ಹೊಸ ಊರು ಗಂಡನಲ್ಲಿ ಬದಲಾವಣೆ ತರಬಹುದೆಂದು ಆಶಿಸಿದಳು ಹಾಗೂ ಜಾವಾದ ಬಗ್ಗೆ ಬಹಳಷ್ಟು ಕೇಳಿದ್ದರಿಂದ, ಅಲ್ಲದೆ ತನ್ನಲ್ಲಿ ಜಾವಾದ ರಕ್ತ ಹರಿಯುತ್ತಿದೆಯೆಂದು ಅವರಿವರು ಹೇಳುತ್ತಿದ್ದುದರಿಂದ ಅದನ್ನು ನೋಡುವ ಕುತೂಹಲವೂ ಆಕೆಯಲ್ಲಿ ಇತ್ತು.

ಕುಟುಂಬವು ಜಾವಾ ದ್ವೀಪದ ಕೇಂದ್ರದಲ್ಲಿದ್ದ ಅಬವಾರಾ ನಗರದಲ್ಲಿ ನೆಲೆಸಿತು. ಜಾವಾದ ಪರಿಸರ ಮಾರ್ಗ್ರೀಟ್‌ಳಿಗೆ ಅತ್ಯುಲ್ಲಾಸಕರವಾಗಿ ಕಂಡಿತು. ಅಲ್ಲಿನ ಹಸಿರು ಗಿಡಮರಗಳು, ಜನರ ಮೈಕಟ್ಟು ಹಾಗೂ ಅವರಲ್ಲಿನ ಉತ್ಸಾಹ ಅವಳಿಗೆ ತುಂಬಾ ಇಷ್ಟವಾಯಿತು. ಇತರ ಡಚ್ ಮಿಲಿಟರಿ ಅಧಿಕಾರಿಗಳ ಹಾಗೆ ಔಪಚಾರಿಕ ಉಡುಗೆ ಧರಿಸದೆ ಅಲ್ಲಿನ ಸ್ಥಳೀಯರು ಧರಿಸುವ ಪಂಚೆಯಂತಹ ಉಡುಗೆ ಧರಿಸತೊಡಗಿದಳು.

ಆದರೆ ಗಂಡ ರುಡಾಲ್ಫ್‌ನಲ್ಲಿ ಯಾವುದೇ ಬದಲಾವಣೆಗಳಾಗಲಿಲ್ಲ. ತನ್ನ ಇತರ ಸಹೋದ್ಯೋಗಿಗಳು ತನ್ನ ಪತ್ನಿಯಲ್ಲಿ ಆಸಕ್ತಿ ತೋರಿ ಮಾತನಾಡುತ್ತಿದ್ದರೆ ಅವನ ಸಿಟ್ಟು, ಅಸೂಯೆ ಹೆಚ್ಚಾಗುತ್ತಿತ್ತು ಹಾಗೆಯೇ ಅವಳ ಮೇಲಿನ ಅವನ ದೌರ್ಜನ್ಯ ಹಾಗೂ 'ವೈವಾಹಿಕ ಅತ್ಯಾಚಾರ'ವೂ ಹೆಚ್ಚಾಗುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಆಕೆ ಒಮ್ಮೆ ಬರೆದಿದ್ದಳು, 'ನಾನು ಸುಂದರವಾಗಿ ಕಾಣಬಹುದೆಂದು ನನ್ನ ಗಂಡ ನನಗೆ ಯಾವುದೇ ಹೊಸ ಬಟ್ಟೆ ಕೊಡಿಸುತ್ತಿಲ್ಲ. ಇದು ಉಸಿರುಗಟ್ಟಿಸು–ವಂಥದು. ಇಲ್ಲಿನ ಯುವ ಲೆಫ್ಟಿನೆಂಟ್‌ಗಳು ನನ್ನ ಹಿಂದೆ ಬೀಳುತ್ತಾರೆ ಹಾಗೂ

ನನ್ನನ್ನು ಪ್ರೀತಿಸುತ್ತಾರೆ. ನನ್ನ ಗಂಡನಲ್ಲಿ ಅಸೂಯೆ, ಸಿಟ್ಟು ತರಿಸದಂತೆ ನಡೆದುಕೊಳ್ಳುವುದೇ ಕಷ್ಟವಾಗುತ್ತಿದೆ'.



ರುಡಾಲ್ಫ್‌ನ ಮುಂಗೋಪ ವಿಪರೀತವಾಗುತ್ತಾ ಹೋಯಿತು. ತನ್ನ ಪತ್ನಿಯೊಂದಿಗೆ ಹಾಗೂ ತನ್ನ ಕೆಲಸಗಾರರೊಂದಿಗೆ ಅತ್ಯಂತ ಕೆಟ್ಟದಾಗಿ ನಡೆದುಕೊಳ್ಳುತ್ತಿದ್ದ. ಅಲ್ಲಿನ ಸ್ಥಳೀಯ ಹೆಂಗಸೊಬ್ಬಳನ್ನು 'ಇಟ್ಟುಕೊಂಡು', ಇದು ಇಲ್ಲಿನ ಸಂಪ್ರದಾಯ, ಇದಕ್ಕೆ ಹೊಂದಿಕೊಂಡು ಹೋಗಬೇಕೆಂದು ಮಾರ್ಗ್ರೀಟ್‌ಳಿಗೆ ಹುಕುಂ ಮಾಡಿದ. ಆಕಾಶವೇ ಮುಗಿಬಿದ್ದಂತೆ ಸುರಿಯುವ ಮಳೆಗಾಲದಲ್ಲಿ ಮಾರ್ಗ್ರೀಟ್ ಮತ್ತೆ ಬಸುರಾದಳು. ಜಾವಾದ ಮಳೆ ಧೋ ಎಂದು ಸುರಿಯುವ ಮಳೆ, ವಾಹನ ಸಂಚಾರವಿರುವುದಿಲ್ಲ, ಇದ್ದರೂ ಕೆಲವೊಮ್ಮೆ ವಾಹನ ಓಡಾಡ ಸಾಧ್ಯವಾಗುವುದೇ ಇಲ್ಲ. ಹತಾಶಳಾಗಿ, ಖಿನ್ನಳಾಗಿ ಚಡಪಡಿಸಿದ ಮಾರ್ಗ್ರೀಟ್ ನಾಲ್ಕು ಗೋಡೆಗಳ ನಡುವೆಯೇ ಕಳೆಯುವಂತಾಯಿತು.

ಅವಳು ಸಂಪೂರ್ಣ ತನ್ನ ಮೇಲೆಯೇ ಅವಲಂಬಿತಳಾಗಿರಲಿ ಎಂದು ರುಡಾಲ್ಫ್ ಜಾವಾದವರ ಭಾಷೆಯಾದ ಮಲಯಾವನ್ನು ಕಲಿಯದಂತೆ ನಿರ್ಬಂಧಿಸಿದ. ಆದರೂ ಆಕೆ ಆತನಿಗೆ ತಿಳಿಯದಂತೆ ಮಲಯಾ ಭಾಷೆ ಕಲಿತಳು. ಆ ಭಾಷೆಯ ಸುಮಧುರ ಧ್ವನಿ ಆಕೆಗೆ ಇಷ್ಟವಾಗಿತ್ತು. ಅವರ ಎರಡನೇ ಮಗು 1898ರ ಮೇ 2ರಂದು ಜನಿಸಿತು. ಎರಡನೇ ಮಗುವಾದ ನಂತರವಾದರೂ ರುಡಾಲ್ಫ್ ಸುಧಾರಿಸಬಹುದೆಂದು ಭಾವಿಸಿದಳು. ಆದರೆ ಎರಡನೇ ಮಗು ಹೆಣ್ಣಾಗಿದ್ದುದರಿಂದ ಆತ ಇನ್ನೂ ನಿರಾಸೆಗೊಳಗಾದ. ಆ ಮಗುವಿಗೆ ಜಿಯಾನ್ ಲೂಯಿ ಎಂದು ತನ್ನ ತಂಗಿಯ ಹೆಸರನ್ನೇ ಇಟ್ಟ, ಆದರೆ ಆ ಮಗುವನ್ನು ಮಲಯಾದ ಹೆಸರಾದ ನೋನ್ ಎಂದೇ ಕರೆಯುತ್ತಿದ್ದರು.

ಹೀಗೇ ಒಂದು ವರ್ಷ ಕಳೆಯಿತು. ರುಡಾಲ್ಫನಿಗೆ ಸುಮಾತ್ರಾದ ಮೇಡನ್‌ಗೆ ವರ್ಗವಾಯಿತು. ತಾನೊಬ್ಬನೇ ಮೊದಲು ಅಲ್ಲಿಗೆ ಹೋಗಿ ನಂತರ ಆಕೆ ಹಾಗೂ ಮಕ್ಕಳನ್ನು ಕರೆಸಿಕೊಳ್ಳುವುದಾಗಿ ಹೇಳಿದ. ಅವರನ್ನು ಅಲ್ಲಿಯೇ ಇದ್ದ ಮತ್ತೊಬ್ಬ ಅಧಿಕಾರಿಯ ಮನೆಯಲ್ಲಿ ಬಿಟ್ಟು ಹೋದ. ಮತ್ತೆ ಅವಳಿಗೆ

ತನ್ನ ಬಾಲ್ಯದ ದಿನಗಳಲ್ಲಿ ಕಾಡುತ್ತಿದ್ದ ಪರಕೀಯತೆಯ ಅನುಭವ ಕಾಡತೊಡಗಿತು. ಅಲ್ಲದೆ ರುಡಾಲ್ಫ್ ಸರಿಯಾಗಿ ಹಣ ಸಹ ಕಳುಹಿಸುತ್ತಿರಲಿಲ್ಲವಾದುದರಿಂದ ಇತರರಿಗೆ ಹೊರೆಯಾಗಿರುವ ಹಿಂಸೆ, ಪಾಪಪ್ರಜ್ಞೆ ಕಾಡತೊಡಗಿತು. ಕೊನೆಗೂ ಒಂದು ದಿನ ಮೇಡನ್‌ನಿಂದ ರುಡಾಲ್ಫನ ಕರೆಬಂತು. ಅಲ್ಲೀಗ ರುಡಾಲ್ಫ್ ಗ್ಯಾರಿಸನ್ ಕಮ್ಯಾಂಡರ್ ಆಗಿದ್ದ ಹಾಗೂ ಆತನಿಗೆಂದೇ ಅಲ್ಲಿ ದೊಡ್ಡ ಬಂಗಲೆಯಿತ್ತು.

ಅಲ್ಲಿ ಕಮ್ಯಾಂಡರನ ಪತ್ನಿಯಾಗಿ ಮಾಗ್ರೀಟ್ ಎಲ್ಲರಿಗೂ ಸಂತೋಷ ಕೂಟಗಳನ್ನು ಏರ್ಪಡಿಸಬೇಕಿತ್ತು. ಮಾಗ್ರೀಟ್‌ಳ ಅತ್ಯಂತ ಸಂತೋಷದಾಯಕ ದಿನಗಳವು. ಆಗ ಆಕೆ ರಾಣಿಯಂತೆ ಮೆರೆದಳು. ಅಮ್‌ಸ್ಟರ್‌ಡ್ಯಾಮ್‌ನಿಂದ ತರಿಸಿಕೊಂಡ ಅತ್ಯಾಧುನಿಕ ಫ್ಯಾಷನಿನ್ನ ಉಡುಗೆಗಳನ್ನು ಧರಿಸಿ ಅತಿಥಿಗಳೊಂದಿಗೆ ಅವರದೇ ಭಾಷೆಯಲ್ಲಿ– ಡಚ್, ಜರ್ಮನ್, ಇಂಗ್ಲಿಷ್ ಅಥವಾ ಫ್ರೆಂಚ್‌ನಲ್ಲಿ ಮಾತನಾಡುತ್ತ, ಕೆಲಸದಾಳುಗಳಿಗೆ ಮಲಯಾ ಭಾಷೆಯಲ್ಲಿ ಆದೇಶಗಳನ್ನು ನೀಡುತ್ತ, ಪಿಯಾನೋದಲ್ಲಿ ಸಂಗೀತ ನುಡಿಸುತ್ತ, ನೃತ್ಯ ಮಾಡುತ್ತ ಕಾಲಕಳೆದಳು.

ತನ್ನ ಸಾಮಾಜಿಕ ಅಂತಸ್ತನ್ನು ಹೆಚ್ಚಿಸಲು ಸಹಕರಿಸಿದ ಮಾಗ್ರೀಟ್‌ಳ ಬಗ್ಗೆ ರುಡಾಲ್ಫ್‌ನಿಗೆ ಕೊನೆಗೂ ಹೆಮ್ಮೆಯೆನಿಸಿತು. ಆದರೆ ಆ ಸುಂದರ ಸಂತೋಷದ ದಿನಗಳು ಹೆಚ್ಚು ದಿನವಿರಲಿಲ್ಲ. ಅವರ ಸುಂದರ ಕೌಟುಂಬಿಕ ಜಗತ್ತು ಒಂದೇ ಒಂದು ರಾತ್ರಿಯ ದುರಂತದಲ್ಲಿ ಕೊನೆಗೊಂಡಿತು.

೩

ಆ ದಿನ 1899ರ ಜೂನ್ 27. ಆ ದಿನದ ತನ್ನೆಲ್ಲ ಕೆಲಸ ಮುಗಿಸಿ ಮಾಗ್ರೀಟ್ ಹಾಸಿಗೆ ಸೇರಿ ಆಗತಾನೆ ಕಣ್ಣುಮುಚ್ಚಿದ್ದಳು. ಇದ್ದಕ್ಕಿದ್ದಂತೆ ಮಕ್ಕಳ ಕೋಣೆಯಲ್ಲಿ ಮಲಗಿದ್ದ ಮಕ್ಕಳು ಕಿಟಾರನೆ ಕಿರುಚಿದರು. ತಕ್ಷಣ ಎದ್ದ ಮಾಗ್ರೀಟ್ ಗಾಭರಿಯಿಂದ ಮಕ್ಕಳ ಕೋಣೆಗೆ ಓಡಿದಳು. ಮಕ್ಕಳು ಮೈಮೇಲೆಲ್ಲಾ ವಾಂತಿಮಾಡಿಕೊಂಡು, ನೋವಿನಿಂದ ಹೊಟ್ಟೆಹಿಡಿದುಕೊಂಡು ಗೋಳಾಡುತ್ತ ನರಳಾಡುತ್ತಿದ್ದರು. ಅವರ ವಾಂತಿ ಅಸಹ್ಯವಾಗಿ ಕಪ್ಪಗೆ ಇದ್ದದ್ದು ಆಕೆಯನ್ನು ಇನ್ನೂ ಹೆದರಿಸಿತು. ಏನಾಗಿರಬಹುದೆಂದು ತಿಳಿಯದೆ ಮಕ್ಕಳನ್ನು ತಬ್ಬಿಕೊಂಡು ಸಂತೈಸಿದಳು. ಅಷ್ಟರಲ್ಲಿ ರುಡಾಲ್ಫ್ ಡಚ್ ವೈದ್ಯರನ್ನು ಹುಡುಕಲು ಮನೆಯಿಂದ ಓಡಿದ. ಆದರೆ ವೈದ್ಯರು ಬರುವಷ್ಟರಲ್ಲಿ ತೀರಾ ತಡವಾಗಿತ್ತು. ಅಷ್ಟರಲ್ಲಿ ಪುಟ್ಟ ನಾರ್ಮನ್‌ನ ಪ್ರಾಣಪಕ್ಷಿ ಹಾರಿಹೋಗಿತ್ತು. ಅರೆಜೀವವಾಗಿದ್ದ ನೋರಾಳನ್ನು

ತಕ್ಷಣ ಆಸ್ಪತ್ರೆಗೆ ಸಾಗಿಸಿದರು. ಕೊನೆಗೂ ನೋರಾ ಬದುಕುಳಿದಳು. ಯಾರೋ ಪಾಪಿಗಳು ಮಕ್ಕಳಿಗೆ ವಿಷ ಉಣಿಸಿದ್ದರು. ಅದು ಯಾರೆಂದು ಕೊನೆಗೂ ತಿಳಿಯಲಿಲ್ಲ. ಅವರ ಸೇವಕರು ಅಥವಾ ಬೇರೆ ಯಾರೋ ರುಡಾಲ್ಫ್‌ನ ಕೆಡಕಿಗೆ ಪ್ರತೀಕಾರವಾಗಿ ಈ ರೀತಿಯ ಅಮಾನವೀಯ ಕಾರ್ಯ ಮಾಡಿದ್ದಾರೆಂದು ಊಹಿಸಲಾಯಿತು.

ಅತ್ಯಂತ ನೋವಿನ ಸನ್ನಿವೇಶಗಳಲ್ಲಿ ಪರಸ್ಪರ ಹತ್ತಿರಾಗುವ ಗಂಡಹೆಂಡಿರಂತೆ ರುಡಾಲ್ಫ್ ಮತ್ತು ಮಾಗ್ರೀಟ್ ತಮ್ಮ ನೋವು ಹಂಚಿಕೊಳ್ಳುವ ಆಪ್ತರಾಗಲಿಲ್ಲ. ಬದಲಿಗೆ ಇನ್ನೂ ಪರಸ್ಪರ ದೂರವಾದರು. ತಮ್ಮದೇ ಖಿನ್ನತೆಯ ಪ್ರಪಂಚಗಳಲ್ಲಿ ಯಾತನೆಯ ಒಂಟಿತನದಲ್ಲಿ ನರಳಿದರು. ಮಾಗ್ರೀಟ್ ಮೌನವಾಗಿ ಕೂತು, ಶೂನ್ಯದತ್ತ ನೋಟ ನೆಟ್ಟು ಗಂಟೆಗಟ್ಟಲೆ ಕೂತುಬಿಡುತ್ತಿದ್ದಳು. ರುಡಾಲ್ಫ್‌ನ ಕುಡಿತ ಇನ್ನೂ ಹೆಚ್ಚಾಯಿತು. ಮನೆಯಲ್ಲಿ ಇಲ್ಲವಾಗಿರುವ ತನ್ನ ಮಗನನ್ನು ಹುಡುಕುವಂತೆ ದಿಕ್ಕುದೆಸೆಯಿಲ್ಲದೆ ಓಡಾಡುತ್ತಿದ್ದ. ಕೆಲವೊಮ್ಮೆ ತನ್ನ ಸಿಟ್ಟನ್ನೆಲ್ಲ ಮಾಗ್ರೀಟ್‌ಳ ಮೇಲೆ ಕಾರಿ ಮಗನ ಸಾವಿಗೆ ಅವಳೇ ಕಾರಣವೆನ್ನುವಂತೆ ಕೂಗಾಡುತ್ತಿದ್ದ. ರುಡಾಲ್ಫ್‌ನಿಗೆ ಮತ್ತೆ ಜಾವಾಕ್ಕೆ ವರ್ಗವಾಯಿತು.

ಕ್ರಮೇಣ ಚೇತರಿಸಿಕೊಂಡ ಮಾಗ್ರೀಟ್ ಹಿಂದೂ ಪುರಾಣ ಗ್ರಂಥಗಳಲ್ಲಿ ಸಾಂತ್ವನ ಪಡೆಯಲಾರಂಭಿಸಿದಳು. ಅವಳ ದೈಹಿಕ ಹಾಗೂ ಮಾನಸಿಕ ಆಸಕ್ತತೆಯಿಂದಾಗಿ ಟೈಫಾಯ್ಡ್‌ಗೆ ಬಲಿಯಾದಳು. ಜ್ವರದ ಬೇಗೆ ಅತಿಯಾಗಿ ಅರೆ ಪ್ರಜ್ಞಾವಸ್ಥೆಯಲ್ಲಿರುವಾಗ ಹಿಂದೂ ದೇವ ದೇವತೆಗಳನ್ನು ಕಾಣುತ್ತಿರುವಂತೆ ಭ್ರಮಿಸುತ್ತಿದ್ದಳು. ಟೈಫಾಯ್ಡ್‌ನಿಂದ ಅಶಕ್ತಳಾಗಿ ಬಿದ್ದಿದ್ದ ಮಾಗ್ರೀಟ್‌ಳ ಬಗ್ಗೆ ಗಂಡ ಯಾವುದೇ ಕನಿಕರ, ಪ್ರೀತಿ ಪ್ರೇಮ ತೋರುತ್ತಿರಲಿಲ್ಲ. ಒಮ್ಮೆ ರುಡಾಲ್ಫ್ 'ಇವಳದು ಬಹಳ ಖರ್ಚಿನ ಕಾಯಿಲೆ! ದಿನಕ್ಕೆ ಐದು ಬಾಟಲಿ ಹಾಲು, ಬಾಟಲಿಯೊಂದಕ್ಕೆ ಒಂದು ಗಿಲ್ಡರ್' ಎಂದು ಗೊಣಗಿಕೊಳ್ಳುತ್ತಿದ್ದುದು ಆಕೆಗೆ ಕೇಳಿಸಿತು.

ಜ್ವರದಿಂದ ಮಾಗ್ರೀಟ್ ಚೇತರಿಸಿಕೊಂಡಳು. ಹತ್ತೊಂಭತ್ತನೇ ಶತಮಾನ ಮುಗಿದು ಇಪ್ಪತ್ತನೇ ಶತಮಾನಕ್ಕೆ ಕಾಲಿಟ್ಟಿತು. ಆದರೆ ಮಾಗ್ರೀಟ್ ಮತ್ತು ರುಡಾಲ್ಫ್‌ರ ವೈವಾಹಿಕ ಬದುಕಿನಲ್ಲಿ ಏನೂ ಸುಧಾರಣೆ ಕಾಣಲಿಲ್ಲ, ಬದಲಿಗೆ ಇನ್ನೂ ಹದಗೆಡುತ್ತಾ ಹೋಯಿತು. ಆತನ ಮಾನಸಿಕ ಹಾಗೂ ದೈಹಿಕ ಹಿಂಸೆಗಳನ್ನು ಆಕೆಗೆ ತಡೆದುಕೊಳ್ಳುವುದು ಸಾಧ್ಯವೇ ಇಲ್ಲವೇನೋ ಎನ್ನಿಸುತ್ತಿತ್ತು. ಅಲ್ಲದೆ ಹೊಸ ಶತಮಾನದಲ್ಲಿ ಮಹತ್ತರ ಬದಲಾವಣೆಗಳಾಗುತ್ತಿದ್ದವು. ಅವುಗಳನ್ನೆಲ್ಲಾ

ತಾನು ಕಳೆದುಕೊಂಡುಬಿಡುತ್ತೇನೇನೋ ಎನ್ನುವ ಭಯ ಅವಳನ್ನು ಕಾಡತೊಡಗಿತು. ತನ್ನ ತಂದೆಗೆ, ಅತ್ತೆಗೆ ಪತ್ರ ಬರೆದು ತಾನು ಯೂರೋಪಿಗೆ ಹಿಂದಿರುಗಲು ಬಯಸಿರುವುದಾಗಿಯೂ, ಅದಕ್ಕಾಗಿ ಹಣ ಕಳಿಸುವಂತೆ ಕೇಳಿಕೊಂಡಳು. ಆದರೆ ಅವರು ಆಕೆಗೆ ಹಣ ಕಳುಹಿಸುವ ಬದಲು ಗಂಡನೊಂದಿಗೆ ಹೊಂದಿಕೊಂಡು, ಅವನು ಹೇಳಿದ್ದು ಕೇಳಿಕೊಂಡು ವಿಧೇಯ ಪತ್ನಿಯಂತೆ ಇರಲು ಸೂಚಿಸಿ ಉತ್ತರ ಬರೆದರು. ಆದರೆ ಇತ್ತ ಮನೆಯಲ್ಲಿ ಸದಾ ಯುದ್ಧದ ವಾತಾವರಣವೇ ಇರುತ್ತಿತ್ತು.

ರುಡಾಲ್ಫ್‌ನಿಗೆ ವಯಸ್ಸಾಗುತ್ತಿತ್ತು. ಆತ ಕೊನೆಗೊಂದು ದಿನ ಯೂರೋಪಿಗೆ ಹಿಂದಿರುಗೋಣವೆಂದು ಹೇಳಿದ. ಮಾಗ್ರೀಟ್‌ಳಿಗೆ ಆದ ಸಂತೋಷ ಅಷ್ಟಿಷ್ಟಲ್ಲ. ಯೂರೋಪಿಗೆ ಬಂದ ತಕ್ಷಣ ರುಡಾಲ್ಫ್ ಮಾಗ್ರೀಟ್‌ಳನ್ನು ಚೆನ್ನಾಗಿ ಹೊಡೆದು ಮಗಳನ್ನು ಕರೆದುಕೊಂಡು ಬೇರೆಹೋದ. ಆಗಿನ ದಿನಗಳಲ್ಲಿ ಹೆಂಡತಿಯೇ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುವುದೆಂದರೆ ಅಪಮಾನಕರ ಹಾಗೂ ಇಲ್ಲಸಲ್ಲದ ಸುದ್ದಿಗೆ ಗ್ರಾಸವಾದಂತೆಯೆ. ಆದರೂ ಮಾಗ್ರೀಟ್ ಆಮ್‌ಸ್ಟರ್‌ಡ್ಯಾಂ ಟ್ರಿಬ್ಯೂನಲ್‌ಗೆ ವಿವಾಹವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದಳು. ಅವಳಿಗೇ ಅಚ್ಚರಿಯಾಗುವಂತೆ ಅದು ಮಂಜೂರಾಯಿತು, ಅಷ್ಟೇ ಅಲ್ಲದೆ ಮಗಳಾದ ನೋನ್‌ಳನ್ನು ದುಃಖತಪ್ತ ತಾಯಿಗೆ ಹಿಂದಿರುಗಿಸುವಂತೆ ಹಾಗೂ ಅವರಿಬ್ಬರ ಜೀವನಕ್ಕೆ ಒಂದುನೂರು ಗಿಲ್ಡರ್ ಹಣ ಕೊಡುವಂತೆ ಟ್ರಿಬ್ಯೂನಲ್ ರುಡಾಲ್ಫ್‌ನಿಗೆ ಆದೇಶಿಸಿತು. ಮಗಳನ್ನು ಆತ ಹಿಂದಿರುಗಿಸಿದನಾದರೂ ತಿಂಗಳ ಕೊನೆಗೆ ಹಣ ಕೊಡಬೇಕಾದಾಗ ತನಗೇ ಬಡತನವಿರುವುದರಿಂದ ಕೊಡಲಾಗುವುದಿಲ್ಲವೆಂದು ಹೇಳಿದ. ಅಷ್ಟಕ್ಕೇ ಬಿಡದೆ ಆತ ತನ್ನ ಹೆಂಡತಿಯನ್ನು ಇನ್ನಷ್ಟು ಹಿಂಸಿಸಲು ಆತ ಆಮ್‌ಸ್ಟರ್‌ಡ್ಯಾಂನ ವೃತ್ತ ಪತ್ರಿಕೆಗಳಲ್ಲಿ 'ತನ್ನನ್ನು ತೊರೆದಿರುವ ನಿರ್ದಯಿ ಹಾಗೂ ಕ್ರೂರಿ ಪತ್ನಿಯಾದ ಮಾರ್ಗರೇತಾ ಮ್ಯಾಕ್‌ಲಿಯಾಡ್ ಝೆಲ್ಲೆಳಿಗೆ ಯಾರೂ ಯಾವುದೇ ಸೇವೆ ಅಥವಾ ಸಾಮಾನು ಸರಂಜಾಮುಗಳನ್ನು ನೀಡಬೇಡಿ' ಎಂಬ ಕೋರಿಕೆಯ ಜಾಹಿರಾತು ಹೊರಡಿಸಿದ. ಅಲ್ಲದೆ ವಯಸ್ಸಾಗಿರುವ ತನ್ನನ್ನು ತನ್ನ ದುಷ್ಟ ಪತ್ನಿ ತೊರೆದಿರುವುದಾಗಿ ಎಲ್ಲರಲ್ಲೂ ಹೇಳಿಕೊಳ್ಳತೊಡಗಿದ. ಯಾರ ಸಹಾಯವೂ ಇಲ್ಲದೆ, ಹಣವೂ ಇಲ್ಲದೆ ಒದ್ದಾಡಿದ ಮಾಗ್ರೀಟ್ ಕೆಲಸಕ್ಕಾಗಿ ಬಹಳಷ್ಟು ಕಡೆ ಪ್ರಯತ್ನಿಸಿದಳು. ಯಾವ ಉದ್ಯೋಗವೂ ದೊರಕಲಿಲ್ಲ. ಮಗಳಾದ ನೋನ್‌ಳನ್ನು ಸಾಕಲಾರದೆ ಅಸಹಾಯಕಳಾದ ಮಾಗ್ರೀಟ್ ಕೊನೆಗೆ ಮನಸ್ಸಿಲ್ಲದಿದ್ದರೂ ಅವಳನ್ನು ರುಡಾಲ್ಫ್‌ನಿಗೇ ಒಪ್ಪಿಸಿದಳು.



ಮತ್ತೆ ಮಾಗ್ರೀಟ್ ತನ್ನ ಮದುವೆಯ ಮೊದಲಿನ ದಿನಗಳ ಪರಿಸ್ಥಿತಿಗೇ ಹಿಂದಿರುಗಿದಳು. ಅವರಿವರು ನೆಂಟರ ಮನೆಯಲ್ಲಿ ಆಸರೆ ಬಯಸಿ, ಅವರ ಮನೆಕೆಲಸ ಮಾಡಿಕೊಡುತ್ತಾ ಇರಲು ಪ್ರಾರಂಭಿಸಿದಳು. ಅವಳಿಗೆ ಪ್ಯಾರಿಸ್ ನಗರಕ್ಕೆ ಭೇಟಿನೀಡಬೇಕೆಂಬ ಆಸೆ ಮೊದಲಿನಿಂದಲೂ ಇತ್ತು. ಅದೇ ಸಮಯದಲ್ಲಿ ಪ್ಯಾರಿಸ್ ನಗರದ ಕನಸು ಕಾಣತೊಡಗಿದಳು. ಹಾಗೂ ಹೀಗೂ ಮಾಡಿ ಒಂದಷ್ಟು ಹಣ ಉಳಿಸಿ ಕೊನೆಗೂ ಪ್ಯಾರಿಸ್ಸಿನ ಹಾದಿ ಹಿಡಿದಳು.

ಪ್ಯಾರಿಸ್ ನಗರ ಅವಳು ಊಹಿಸಿದ್ದಂತೆ ವೈಭವೋಪೇತವಾಗಿಯೇ ಇತ್ತು. ತನ್ನ ಕನಸಿನ ನಗರಕ್ಕೆ ಬಂದುದಕ್ಕಾಗಿ ಆಕೆಗಾದ ಸಂತೋಷ ಅಷ್ಟಿಷ್ಟಲ್ಲ. ನಾಟಕ ಹಾಗೂ ಮಾಡೆಲಿಂಗ್‌ನಲ್ಲಿ ಉದ್ಯೋಗಕ್ಕಾಗಿ ಬಹಳ ಪ್ರಯತ್ನಿಸಿದಳು. ಆದರೆ ಆಗಿನ್ನೂ ಪ್ಯಾರಿಸ್ ನಗರ ಆಕೆಯನ್ನು ತನ್ನ ಮಡಿಲಿಗೆ ಸೇರಿಸಿಕೊಳ್ಳಲು ಸಿದ್ಧವಾಗಿರಲಿಲ್ಲ. ಮಾಗ್ರೀಟ್‌ಳಿಗೆ ಎಲ್ಲೂ ಉದ್ಯೋಗ ದೊರಕಲಿಲ್ಲ. ಹತಾಶ,

ದುಃಖತಪ್ತ ಮಾರ್ಗ್ರೀಟ್ ಹ್ಯಾಪೆಮೋರೆ ಹಾಕಿಕೊಂಡು ಹಿಂದಿರುಗಿದಳು.

ಮಾರ್ಗ್ರೀಟ್‌ಳ ಬದುಕಿನ ಅತ್ಯಂತ ಯಾತನಾಮಯ ದಿನಗಳವು. ಯಾವ ದಿಕ್ಕೂ ತೋಚದಂತಾದಳು. ಈ ಜಗತ್ತಿನಲ್ಲಿ ಆಕೆಗೆ ಇರಲು ಯಾವುದೇ ಸ್ಥಳವಿಲ್ಲವೆನ್ನಿಸತೊಡಗಿತು. ಯಾವುದೇ ಉದ್ಯೋಗವಿಲ್ಲ, ಉದ್ಯೋಗ ಅರಸುವಂತಹ ಕೌಶಲತೆಯಿಲ್ಲ, ಗಂಡನಿಲ್ಲ, ಮಗುವಿಲ್ಲ, ನಿಯತ ಆದಾಯ ಕೊಡುವಂತಹುದೇನೂ ಇಲ್ಲ. ಇನ್ನು ತನ್ನ ಬದುಕು ಇಷ್ಟೆಯೇ? ತನ್ನ ಇಡೀ ಬದುಕೆಲ್ಲ ಅವರಿವರು ನೀಡುವ ದಾಕ್ಷಿಣ್ಯದ ದಾನದಿಂದಲೇ ಬದುಬೇಕೆ? ತನ್ನೆಲ್ಲ ಅಸಹನೀಯ ಹತಾಶೆಯಿಂದ ಒಂದಷ್ಟು ಧೈರ್ಯ ತಂದುಕೊಂಡಳು. ಕೊನೆಯ ಪ್ರಯತ್ನವಾಗಿ ಮತ್ತೊಮ್ಮೆ ತನ್ನ ಕನಸಿನ ನಗರಿ ಪ್ಯಾರಿಸ್ಸಿಗೆ ಹೋಗಿ ಬದುಕುವ ದಾರಿ ಅರಸಲು ನಿರ್ಧರಿಸಿದಳು.

ಮಾರ್ಗ್ರೀಟ್ ಪ್ಯಾರಿಸ್ಸಿಗೆ ಹೊಸ ಬದುಕು ಅರಸಿ ಬಂದಿದ್ದಳು. ಹೊಸ ಬದುಕು..... ಹಾಗಾಗಿ ತನಗೆ ಹೊಸ ಹೆಸರನ್ನೇ ಇಟ್ಟುಕೊಂಡಳು.....ಮಾತಾ ಹರಿ. ಮಲಯಾ ಭಾಷೆಯಲ್ಲಿ ಮಾತಾ ಹರಿ ಎಂದರೆ 'ಸೂರ್ಯ' ಅಥವಾ 'ಮುಂಜಾವಿನ ಕಣ್ಣು' ಎಂದರ್ಥ.

ಆ ದಿನ ಮಾರ್ಚ್ 13, 1905. ಪ್ಯಾರಿಸ್ಸಿನ ಮ್ಯೂಸೀ ಗ್ಯೂಮೆಯಲ್ಲಿ ಒಂದು ನೃತ್ಯ ಪ್ರದರ್ಶನವಿತ್ತು. ಹೊಸ ನಮೂನೆಯ ನೃತ್ಯವೆಂದು ನೋಡಲು ಸಾಕಷ್ಟು ಜನ ಸೇರಿದ್ದರು. ವೇದಿಕೆಯ ಮೇಲೆ ದೊಡ್ಡ ನಟರಾಜನ ವಿಗ್ರಹ. ಅದರ ಕಾಲಬಳಿ ಉರಿಯುತ್ತಿರುವ ದೀಪವಿತ್ತು. ಐದು ಜನ ನೃತ್ಯಾರ್ಥಿಯರು ಮೆಲುವಾದ ಸಂಗೀತಕ್ಕೆ ಹೆಜ್ಜೆಗೂಡಿಸಿ ನೃತ್ಯಮಾಡತೊಡಗಿದರು. ಪಾರದರ್ಶಕ ಬಟ್ಟೆ ಅವರ ಸೊಂಟ ಮತ್ತು ಎದೆಯ ಮೇಲಿತ್ತು. ಕಾಲಲ್ಲಿ ಗೆಜ್ಜೆಗಳು, ಸೊಂಟದಲ್ಲಿ ಡಾಬು, ಕೈಯಲ್ಲಿ ಫಳಫಳಹೊಳೆಯುವ ಬಳೆಗಳು, ನಾಗಂದಿಗೆ ತೊಟ್ಟ ಒಬ್ಬಳು ನೃತ್ಯಗಾತಿ ಹಾವಂತೆ ಬಳಕುತ್ತಾ ಹೆಜ್ಜೆ ಹಾಕುತ್ತಿದ್ದುದು ವೀಕ್ಷಕರ ಮೈ ಬೆಚ್ಚಗಾಗಿಸುತ್ತಿತ್ತು. ನೃತ್ಯ ಶಿವನನ್ನು ಒಲಿಸಿಕೊಳ್ಳುವುದಾಗಿತ್ತು. ವೇದಿಕೆಯ ಮೇಲಿನ ಎಲ್ಲ ದೀಪಗಳು ಮಂಕಾಗಿ ಶಿವನ ಕಾಲಬಳಿಯ ದೀಪವೊಂದು ಮಾತ್ರ ಉರಿಯುತ್ತಿತ್ತು. ಮುಖ್ಯ ನೃತ್ಯಗಾತಿ ಶಿವನನ್ನು ಒಲಿಸಿಕೊಳ್ಳಲು ತನ್ನ ಮೈಮೇಲಿನ ಬಟ್ಟೆಗಳನ್ನು ಒಂದೊಂದಾಗಿ ತೆಗೆದು ಎಸೆಯತೊಡಗಿದಳು. ಸೊಂಟತೂಗಿಸುತ್ತಾ ಭ್ರಮಾ ಸಂಭೋಗದಲ್ಲಿ ನಿರತಳಾಗಿರುವಂತೆ ಇಡೀ ಮೈಯನ್ನು ನುಲಿಯತೊಡಗಿದಳು. ಪ್ರೇಕ್ಷಕರೆಲ್ಲಾ ತಾವೂ ಆ ಕಾರ್ಯದಲ್ಲಿ ಭಾಗವಹಿಸಿರುವಂತೆ ನಿಶ್ಶಬ್ದವಾಗಿ ತಮ್ಮ ಏರು ಎದೆಬಡಿತದೊಡನೆ ವೀಕ್ಷಿಸುತ್ತಿದ್ದರು. ತನ್ನ ನರ್ತನದಿಂದ



ಪ್ರೇಕ್ಷಕರನ್ನು ಸುಖದ ಉತ್ತುಂಗಕ್ಕೆ ಒಯ್ದ ಆ ನೃತ್ಯಗಾತಿ ಕೊನೆಗೆ ಸ್ಖಲಿಸಿದಂತೆ ಮುಲುಗುತ್ತಾ ಆಯಾಸಗೊಂಡಂತೆ ಶಿವನ ಪಾದಗಳ ಮೇಲೆ ತಲೆಯಿಟ್ಟು ಕೂತಳು. ಆ ಮಂಕು ಕತ್ತಲಲ್ಲಿ ವೇದಿಕೆಯ ಹಿಂದಿನಿಂದ ಮತ್ತೊಬ್ಬಾಕೆ ಬಂದು ಆ ನೃತ್ಯಗಾತಿಯ ಮೇಲೆ ತೆಳುವಾದ ಬಟ್ಟೆ ಹೊದಿಸಿ ಹಿಂದೆ ಸರಿದಳು. ಆಕೆ ಅ ಮಬ್ಬುಗತ್ತಲಲ್ಲೇ ಎದ್ದುನಿಂತು ಪ್ರೇಕ್ಷಕರೆಡೆಗೆ ಕೈಬೀಸಿದಳು. ಕನಸಿನಿಂದ ಎಚ್ಚೆತ್ತ ಭ್ರಮೆಯಲ್ಲಿದ್ದ ಪ್ರೇಕ್ಷಕರು ಕಿವಿಗಡಚಿಕ್ಕುವಂತೆ ಚಪ್ಪಾಳೆ ತಟ್ಟಿದರು. ಅವರಿಗೆ ಈ ರೀತಿಯ ನೃತ್ಯ ಹೊಸದಾಗಿತ್ತು. ಈ ನೃತ್ಯ ಮಾಡಿದ ಮಾತಾ ಹರಿ ಬೆಳಕುಹರಿಯುವಷ್ಟರಲ್ಲಿ ಪ್ರಖ್ಯಾತಳಾದಳು. ಬಟ್ಟೆಕಳಚಿ ಮೈಪ್ರದರ್ಶಿಸುವ ಕ್ಯಾಬರೆ ನೃತ್ಯವನ್ನು ಕಲೆಯೆಂಬಂತೆ ಮಾಡಿದಳು.

ಆಕೆಯ ಖ್ಯಾತಿ ಆಕೆಯನ್ನು ಸ್ಪೇನ್, ಮಾಂಟೆಕಾರ್ಲೊ ಮತ್ತು ಜರ್ಮನಿಗಳಿಗೆ ಕರೆದೊಯ್ಯಿತು. ವೇದಿಕೆಯ ಮೇಲೆ ಸಂಪೂರ್ಣ ನಗ್ನಳಾಗುವಷ್ಟು ಬಟ್ಟೆಯನ್ನು ಕಳಚುತ್ತಿದ್ದಳು. ಆದರೆ ಎದೆ ಮುಚ್ಚಿರುತ್ತಿದ್ದ ಲೋಹದ 'ರತ್ನಕಚಿತ

ಮೊಲೆಬಟ್ಟಲು'ಗಳನ್ನು ತೆಗೆಯುತ್ತಲೇ ಇರಲಿಲ್ಲ. ಹಾಗಾಗಿ ಆಕೆಗೆ ಇಲ್ಲದುವುಗಳ ಬಗ್ಗೆ ಪ್ರೇಕ್ಷಕರು ಇದೆಯೆಂದು ಊಹಿಸಿಕೊಂಡೇ ತೃಪ್ತಿಪಡಬೇಕಾಗಿತ್ತು. ಅಲ್ಲದೆ ಸಂಪೂರ್ಣ ನಗ್ನತೆ ನಿಷಿದ್ಧವಿರುವೆಡೆ ಆಕೆ ತನ್ನ ಚರ್ಮದ ಬಣ್ಣದ ತೆಳು ಸ್ಟಾಕಿಂಗ್ ಧರಿಸಿರುತ್ತಿದ್ದಳು.

ಯಾರಿಗೂ ಆಕೆಯ ಹಿಂದಿನ ಬಡತನದ, ಯಾತನೆಯ, ಅತೀವ ಹಿಂಸೆಯನುಭವಿಸಿದ ಬದುಕಿನ ಬಗ್ಗೆ ತಿಳಿದಿರಲಿಲ್ಲ. ಆಕೆಯ ಮೂಲ ಹೆಸರೇ ಯಾರಿಗೂ ತಿಳಿಯದಂತೆ ಎಚ್ಚರವಹಿಸಿದಳು. ಎಲ್ಲರಿಗೂ ಆಕೆ ಭಾರತೀಯ ಬ್ರಾಹ್ಮಣ ಪೂಜಾರಿ ಮತ್ತು ದೇಗುಲ ನರ್ತಕಿಯ ಮಗಳೆಂದೇ ಹೇಳಿಕೊಳ್ಳತೊಡಗಿದಳು. ಆಕೆಯ ತಾಯಿ ಮಾತಾ ಹರಿಗೆ ಜನ್ಮನೀಡುವ ಸಮಯದಲ್ಲಿ ಸತ್ತು–ಹೋದರೆಂದೂ, ಆಕೆಯನ್ನು ಶಿವನ ದೇವಾಲಯದಲ್ಲಿ ಆತನ ಸೇವೆಗೆಂದೇ ಸಮರ್ಪಿಸಿ ಆಕೆಯನ್ನು ಬೆಳೆಸಿದರೆಂದು ಎಲ್ಲರೂ ನಂಬುವಂತೆ ಹೇಳುತ್ತಿದ್ದಳು. 'ನನ್ನ ನೃತ್ಯ ಪವಿತ್ರ ಕಾವ್ಯದಂತೆ, ಪ್ರತಿಯೊಂದು ಭಂಗಿಯೂ ಒಂದು ವಾಕ್ಯ. ನಾನು ನೃತ್ಯ ಕಲಿತ ದೇವಾಲಯವೇ ಇಲ್ಲಿದೆ, ಏಕೆಂದರೆ ನಾನೇ ದೇಗುಲ. ನನ್ನೆಲ್ಲ ನೃತ್ಯ ಭಂಗಿಗಳು ಪವಿತ್ರ ಪಠ್ಯದ ರೀತಿಯೇ ಇದೆ' ಎನ್ನುತ್ತಿದ್ದಳು. ಆಗಿನ ಯೂರೋಪಿಯನ್ನರಿಗೆ ಭಾರತದ ಬಗೆಗಾಗಲೀ, ಏಷ್ಯಾದ ಸಂಸ್ಕೃತಿಯ ಬಗೆಗಾಗಲೀ ಅಷ್ಟಾಗಿ ತಿಳಿದಿರಲಿಲ್ಲವಾದುದರಿಂದ ಎಲ್ಲರೂ ಆಕೆಯ ಮಾತುಗಳನ್ನು ನಂಬುತ್ತಿದ್ದರು. ಆಕೆಯ 'ಕ್ಯಾಬರೆ' ನೃತ್ಯವನ್ನು ಅತ್ಯಂತ ಭಾವುಕರಾಗಿ ನೋಡುತ್ತಿದ್ದರು. ವಾಸ್ತವವೆಂದರೆ ಮಾತಾ ಹರಿ ಭಾರತವನ್ನೇ ನೋಡಿರಲಿಲ್ಲ.

4

ತನ್ನೆಲ್ಲ ಸಂಕೋಚ, ಹಿಂಜರಿಕೆಗಳನ್ನು ಕಿತ್ತೆಸೆದ ಮಾತಾ ಹರಿ ನಗ್ನ ನರ್ತಕಿಯಾಗಿ, ನಗ್ನ ರೂಪದರ್ಶಿಯಾಗಿ ಪ್ರಖ್ಯಾತಳಾದಳು. 1905ರ ಪ್ಯಾರಿಸ್ಸಿನ ನರ್ತನದ ನಂತರ ಎಲ್ಲ ಪತ್ರಿಕೆಗಳಲ್ಲೂ ಆಕೆಯದೇ ಸುದ್ದಿ– 'ಇದ್ದಕ್ಕಿದ್ದಂತೆ ಮಾತಾ ಹರಿ ಕಾಣಿಸಿಕೊಳ್ಳುತ್ತಾಳೆ; ಮುಂಜಾವಿನ ಕಣ್ಣು, ವೈಭವೋಪೇತ ಸೂರ್ಯ, ಆಕೆಯ ನಗ್ನತೆಯನ್ನು ಪೂಜಾರಿಗಳು ಮತ್ತು ದೇವತೆಗಳು ಮಾತ್ರ ನೋಡಿರುವವರಂತೆ. ತೆಳ್ಳಗೆ, ಉದ್ದಕ್ಕೆ ಇರುವ ಆಕೆ ಹಾವಾಡಿಗನ ಪುಂಗಿಗೆ ಮೈಮರೆತು ಓಲಾಡುವ ಸುರುಳಿ ಬಿಚ್ಚಿದ ಹಾವಿನಂತೆ, ಉರಿವ ಜ್ವಾಲೆಯೊಂದಿಗೇ ಬೆರೆತುಹೋಗುವಂತಿರುವ ಆಕೆಯ ನೃತ್ಯ.... ಇದ್ದಕ್ಕಿದ್ದಂತೆ ಬಲವಾದ

ಹೊಡೆತದಂತೆ ತನ್ನ ಮೈ ಮೇಲಿನ ಪರದೆಗಳನ್ನು, ಮೈ ಮೇಲಿನ ಒಡವೆಗಳನ್ನು ಕಿತ್ತೊಗೆಯುತ್ತಾಳೆ, ಉರಿವ ಬೆಂಕಿಯ ಮುಂದೆ ಅವಳ ನಗ್ನ ದೇಹ, ಎದೆಯ ಮೇಲಿನ ಚಿನ್ನದ ಬಟ್ಟಲುಗಳು ಫಳಫಳ ಹೊಳೆಯುತ್ತವೆ.... ಎರಡೂ ಕೈಗಳನ್ನು ಮೇಲೆ ಚಾಚಿ ತೊಡರುತ್ತಾ ಎದ್ದುನಿಂತು ಮಬ್ಬುಗತ್ತಲಲ್ಲಿ ಹಾರಲು ದಾರಿಕಾಣದ ಪಕ್ಷಿಯಂತೆ ನೀಳಗೂದಲ ಚೆಲುವೆ ನೆಲಕ್ಕೆ ಕುಸಿಯುತ್ತಾಳೆ......ಹೆಣ್ಣು ಹುಲಿಯಂತೆ, ಜಗದ ಹೆಣ್ತನವನ್ನೆಲ್ಲ ತನ್ನ ಮೈಗೂಡಿಸಿಕೊಂಡಿರುವಂತೆ, ವೈಭವದ ದುರಂತ ನಾಯಕಿಯಂತೆ, ನೆಳಲು ಬೆಳಕಿನಲ್ಲಿ ತನ್ನ ದೇಹದ ಉಬ್ಬುತಗ್ಗುಗಳ ಚಿತ್ತಾರದ ರಂಗೋಲಿ ಹರಡಿ, ನೂರು ಸಾವಿರ ತಾಳಗಳಿಗೆ ಉತ್ಕಟ ಕಾಮೋನ್ಮಾದದಿಂದ ನರ್ತಿಸುತ್ತಾಳೆ ಪವಿತ್ರಾತ್ಮನ ಮುಂದೆ ನರ್ತಿಸಿದ ಡೇವಿಡ್‌ನಂತೆ, ತಾಮಿಟ್ ಮುಂದೆ ನರ್ತಿಸಿದ ಸಲಂಬೋನಂತೆ, ಹೆರಾಡ್‌ನ ಮುಂದೆ ನರ್ತಿಸಿದ ಸಲೋಮ್‌ಳಂತೆ...'

ಆದರೆ ಮಾತಾ ಹರಿಯ ನರ್ತನ ಎಂಥದು? ಒಂದು ರೀತಿಯ ಎರ್ಕ್ರೋಟಿಕ್ ಎನ್ನಿಸುವ ನರ್ತನಗಳೆಂದರೆ ಆಕೆ ತನ್ನ ಗಂಡನ ಜೊತೆ ಡಚ್ ಈಸ್ಟ್ ಇಂಡೀಸ್– ನಲ್ಲಿದ್ದಾಗ ನೋಡಿದ ಜಾವಾ ಧಾರ್ಮಿಕ ನೃತ್ಯ ನಾಟಕಗಳು. ಯೂರೋಪಿನ ಪ್ರೇಕ್ಷಕರಿಗಾಗಿ ಈಕೆ ಮಾಡಿದ ನೃತ್ಯ ಒಂದು ರೀತಿಯ ಕಲಸು ಮೇಲೋಗರವಾಗಿತ್ತು. ಅವಳ ಹೆಸರೂ ಸಹ ಮಲಯಾ ಭಾಷೆಯದಾಗಿತ್ತು. ಆದರೆ ಪ್ಯಾರಿಸ್ಸಿನ ಜನ ಅದರ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ. ಅವಳ ಹೆಸರು, ಮಬ್ಬುಗತ್ತಲಿನಲ್ಲಿನ ಅವಳ ಬೆತ್ತಲೆ ನೃತ್ಯ ಅವರನ್ನು ಮರಳುಮಾಡಿತ್ತು. ಅವಳ ನೃತ್ಯ ಯಾವುದಾದರೇನಂತೆ. ಆಕೆ ಯಾವುದೇ ಮಹೋನ್ನತ ಸಂಸ್ಕೃತಿಯ ವಕ್ತಾರಳಾಗಿರಲಿಲ್ಲ, ಆಕೆಗೆ ತನ್ನ ಬದುಕು ಸಾಗಿಸಬೇಕಾಗಿತ್ತು, ತನ್ನ ಯಾತನೆಯ ದುರಂತದ ಬದುಕಿನಿಂದ ಹೊರ ಬರಬೇಕಾಗಿತ್ತು, ಗಂಡಸರಿಗೆ ಏನು ಬೇಕು, ಅವರು ಏನು ಕೊಳ್ಳಲು ಮುಗಿಬೀಳುವರೆಂಬುದು ಆಕೆಗೆ ತಿಳಿದಿತ್ತು. ಹಾಗಾಗಿ ಆಕೆ ತನ್ನ ದೇಹವನ್ನು, ತನ್ನ ಬದುಕನ್ನು ಬಿಕರಿಗಿಟ್ಟಿದ್ದಳು. ಪ್ಯಾರಿಸ್ಸಿನಲ್ಲಿ ಆಕೆ ಕಂಡ ಯಶಸ್ಸು ತಾನು ಅನುಭವಿಸಿರುವ ಮಾನಸಿಕ ಹಾಗೂ ದೈಹಿಕ ಹಿಂಸೆಗಳಿಗೆ ಧಾರ್ಮಿಕ ಪ್ರತಿಫಲ ವೆಂಬಂತಿತ್ತು.

ಬಹುಶಃ ವೇದಿಕೆಯ ಸಂಪೂರ್ಣ ನಗ್ನರಾಗುವ ಧೈರ್ಯ ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಬಹಳಷ್ಟು ಜನರಿಗೆ ಇರಲಿಲ್ಲವೆನ್ನಿಸುತ್ತದೆ. ಹಾಗಾಗಿ ಮಾತಾ ಹರಿ ದಂತಕತೆಯಾದಳು. ತನ್ನ ದೇಹದ ನಗ್ನ ಫೋಟೋಗಳನ್ನು ತೆಗೆಸಿ ಮಾರಾಟಮಾಡಿದಳು; ಅವು ದಿನಬೆಳಗಾಗುವಷ್ಟರಲ್ಲಿ



ಮಾರಾಟವಾಗುತ್ತಿದ್ದವು. ಎಲ್ಲರೂ ಅವಳ ಗೆಳೆತನಕ್ಕಾಗಿ, ಸಂಗಕ್ಕಾಗಿ ಹಾತೊರೆಯುತ್ತಿದ್ದರು. ಆಕೆ ಉತ್ತಮ ವ್ಯಾಪಾರಸ್ಥಳಾಗಿದ್ದಳು, ಯಾರು ಹೆಚ್ಚು ಹಣ ಕೊಡಲು ಸಿದ್ಧರಿರುವರೋ ಅವರಿಗೆ ಒಲಿಯುತ್ತಿದ್ದಳು. ಬರುಬರುತ್ತಾ ಆಕೆ ಪ್ರಖ್ಯಾತ ನಾಯಕಸಾನಿಯಾಗತೊಡಗಿದಳು.

ಮಾತಾ ಹರಿಯ ಮೊದಲ ಪ್ರಿಯಕರ ಒಬ್ಬ ಜರ್ಮನ್ ಲೆಫ್ಟಿನೆಂಟ್ ಹೆರ್ ಕೀಪರ್ಟ್ ಎಂಬಾತ. ಆತ 1906ರಲ್ಲಿ ಆಕೆಯನ್ನು ಜರ್ಮನಿಗೆ ಕರೆತಂದು ತನ್ನ ಮನೆಯಿಂದ ಸ್ವಲ್ಪ ದೂರದಲ್ಲಿ ತನ್ನ ಹೆಂಡತಿಗೆ ತಿಳಿಯದಂತೆ ಅಪಾರ್ಟ್‌ಮೆಂಟ್ ಒಂದರಲ್ಲಿ ಇರಿಸಿದ. ಬಹುಶಃ ಈ ಜರ್ಮನ್ ಲೆಫ್ಟಿನೆಂಟ್‌ನೊಂದಿಗಿನ ಸಂಬಂಧವೇ ಆಕೆ ಮುಂದೆ ಜರ್ಮನ್ ಗೂಢಚಾರಳು ಎನ್ನುವ ಸಂಶಯಕ್ಕೆ ಎಡೆಮಾಡಿಕೊಟ್ಟಿದ್ದರೂ ಮಾಡಿರಬಹುದು. ಕೀಪರ್ಟ್ ಕೊಡಿಸಿರುವ ಅಪಾರ್ಟ್‌ಮೆಂಟಿನಲ್ಲಿದ್ದರೂ ಆಕೆ ತನ್ನ ನೃತ್ಯ ಹಾಗೂ ಇತರ ಗಂಡಸರೊಂದಿಗಿನ ಸಂಬಂಧ ಮುಂದುವರಿಸಿದ್ದಳು. ಆಕೆಯ ನೃತ್ಯ ಆಕೆಯನ್ನು ಸ್ಪೇನ್ ಮಾಂಟೆ ಕಾರ್ಲೊ, ವಿಯೆನ್ನಾ ಮುಂತಾದ ದೇಶಗಳಿಗೆ ಕರೆದೊಯ್ದಿತು. 1907ರಲ್ಲಿ ತನ್ನ ಪ್ರಿಯಕರ ಹೆರ್ ಕೀಪರ್ಟ್‌ನೊಂದಿಗೆ ಈಜಿಪ್ಟ್ ಪ್ರವಾಸ ಮಾಡಿದಳು. ಆಕೆ ತನ್ನ ಏಜೆಂಟ್ ಗೇಬ್ರಿಯಲ್ ಅಸ್ಟ್ರೂಕ್‌ಳಿಗೆ ಬರೆದ ಪತ್ರದಂತೆ ಆಕೆಯ ಪ್ರವಾಸ ಈಜಿಪ್ಟ್ ನೃತ್ಯದ ಅಧ್ಯಯನವಾಗಿತ್ತು. 'ಆದರೆ ಸುಂದರ ನೃತ್ಯಗಳೇ ಇಲ್ಲಿ ಕಾಣಬರುತ್ತಿಲ್ಲ, ಎಲ್ಲವೂ ಕಣ್ಮರೆಯಾಗಿವೆ. ಈಗಿರುವ ನೃತ್ಯಗಳು ಅಂತ ಪ್ರಮುಖವೇನಿಲ್ಲ' ಎಂದಿದ್ದಳು.

ಪ್ಯಾರಿಸ್ಸಿನಲ್ಲಿ ಮಾತಾ ಹರಿ ಕಾಲಿರಿಸಿದ ಸಮಯವೂ ಆಕೆಗೆ ಅನುಕೂಲಕರವಾಗೇ ಇತ್ತು. ಸಿರಿವಂತರು ತಮ್ಮ ಸಿರಿತನದಲ್ಲಿ ಕೊಳೆಯುತ್ತಿದ್ದರು, ಲಂಪಟತನ ರಾರಾಜಿಸುತ್ತಿತ್ತು. ತಮ್ಮ ಸಿರಿತನದ ಬಡಾಯಿಗೋಸ್ಕರ

ನಾಯಕಸಾನಿಯರನ್ನು ತಮ್ಮ ಜೊತೆಗಿಟ್ಟು ಪ್ರದರ್ಶಿಸುತ್ತಿದ್ದರು. ಇಂಥವರಿಗೆಲ್ಲ ಮಾತಾ ಹರಿ ಸುಲಭವಾಗಿ ಲಭಿಸುವಂತಿದ್ದಳು. ಆಕೆಗೂ ಸಿರಿವಂತಿಕೆಯ ಬದುಕು ಬೇಕಾಗಿತ್ತು. ಒಂದು ಕಾಲದಲ್ಲಿ ಅವಳ ಮನೆಯಲ್ಲೂ ಕೈಗೊಂದು ಆಳು ಕಾಲಿಗೊಂದು ಆಳು ಇಟ್ಟುಕೊಂಡವಳು, ಊರ ಜನಕ್ಕೆಲ್ಲ ಔತಣ ಕೂಟಗಳನ್ನು ಏರ್ಪಡಿಸಿದ್ದವಳು. ಈಗ ಆಕೆಗೆ ಹಣ ಸಂಪಾದಿಸಲೇ ಬೇಕಾಗಿತ್ತು. ತನ್ನ ಹಿಂದಿನ ಬದುಕನ್ನು ಆಕೆ ತಿರುಗಿನೋಡುವಂತೆಯೇ ಇರಲಿಲ್ಲ, ಏಕೆಂದರೆ ಆ ಸಮಯದಲ್ಲಿ ವಿವಾಹ ವಿಚ್ಛೇದನ ಪಡೆದ ಹೆಂಗಸನ್ನು ತೀರಾ ತುಚ್ಛವಾಗಿ ಕಾಣುತ್ತಿದ್ದರು. ಅದರಲ್ಲೂ ಮಾತಾ ಹರಿ ತಾನೇ ವಿವಾಹ ವಿಚ್ಛೇದನ ಬೇಕೆಂದು ಕೋರಿ ಪಡೆದವಳು. ಅಂತ ಹೆಂಗಸರಿಗೆ ಮರುಮದುವೆಯಾಗುವ ಅವಕಾಶಗಳು ತೀರಾ ಅಪರೂಪವಾಗಿತ್ತು. ಮೊದಲೆಲ್ಲಾ ಗಂಡಸರು ತನ್ನಿಂದ ಆಕರ್ಷಿತರಾಗಿ ತನ್ನ ಹಿಂದೆ ಮುಂದೆ ಓಡಾಡಲೆಂದು ಬಯಸಿದ್ದವಳು. ಈಗ ಗಂಡಸರು ಯಾವುದೇ ಬಂಧನದ ಅಪೇಕ್ಷೆಯಿಲ್ಲದೆ, ಯಾವುದೇ ಬಾಧ್ಯತೆಯಿಲ್ಲದೆ ತನ್ನ ಜೊತೆ ಕೆಲ ಕಾಲ ಕಳೆಯಲು, ಹಣ ಚೆಲ್ಲಲು ತನ್ನ ಹಿಂದೆ ಮುಂದೆ ಓಡಾಡುವಾಗ ತಾನೇಕೆ ಬೇಡವನ್ನಬೇಕು ಎಂದುಕೊಂಡಳು.

ಕ್ರೀಡಾಪಟುವಿನ ವೃತ್ತಿಪರ ಬದುಕಿನಂತೆ ನರ್ತಕಿಯೊಬ್ಬಳ ವೃತ್ತಿಪರ ಬದುಕೂ ಸಹ ಸಾಮಾನ್ಯವಾಗಿ ಅಲ್ಪಸಮಯದ್ದು. ತನಗೆ ವಯಸ್ಸು ಮುವ್ವತ್ತಾಗುತ್ತಿರುವಾಗ ಈ ಬದುಕಿಗೆ ಪ್ರವೇಶಿಸಿದ್ದಳು. ಅದು ಇತರರಿಗೆ ಹೋಲಿಸಿದಲ್ಲಿ ತೀರಾ ತಡವಾದ ಪ್ರವೇಶ. ಅವಳ ದೇಹದ ಸ್ನಾಯುಗಳ ಬಿಗಿತ ಕಡಿಮೆಯಾಗತೊಡಗಿತ್ತು, ದೇಹದ ತೂಕವೂ ಹೆಚ್ಚಾಗುತ್ತಿತ್ತು. ಅವಳ ನರ್ತನದಲ್ಲಿದ್ದ ತಾಜಾತನ ಕಡಮೆಯಾಗತೊಡಗಿತ್ತು. ಒಮ್ಮೆ 1908ರಲ್ಲಿ ಪ್ರವಾಸದಿಂದ ಹಿಂದಿರುಗಿದ ಮಾತಾ ಹರಿ ತನ್ನನ್ನು ಅನುಕರಿಸುವ ಹಲವಾರು ನರ್ತಕಿಯರು ಹುಟ್ಟಿಕೊಂಡಿರು–ವುದನ್ನು ಕಂಡು ಅವಳ ಮನಸ್ಸು ಖಿನ್ನವಾಯಿತು, ಒಂದು ರೀತಿಯ ಅತಂತ್ರತೆ ಅವಳನ್ನು ಕಾಡತೊಡಗಿತು. ಆಕೆಯನ್ನು ಅನುಕರಿಸುತ್ತಿದ್ದ ಹಲವಾರು ನರ್ತಕಿಯರು ಇನ್ನೂ ಚಿಕ್ಕವಯಸ್ಸಿನವರಾಗಿದ್ದು ಇನ್ನೂ ಸುಂದರಿಯರಾಗಿದ್ದರು ಹಾಗೂ ಇನ್ನೂ ಉತ್ತಮವಾಗಿ ನರ್ತಿಸ ಬಲ್ಲವರಾಗಿದ್ದರು. ತಾವೂ ಸಹ ನಗ್ನರಾಗಿ ನರ್ತಿಸಿದಲ್ಲಿ ಜನ ತಮ್ಮನ್ನೂ ಮೆಚ್ಚುವರೆಂಬುದನ್ನು ಅವರು ಕಂಡುಕೊಂಡಿದ್ದರು. ಆ ಸಮಯದಲ್ಲಿ ಪತ್ರಿಕೆಯ ಸಂದರ್ಶನವೊಂದರಲ್ಲಿ ಮಾತಾ ಹರಿ ಅಂತಹ ನರ್ತಕಿಯರ ಬಗ್ಗೆ ದೂರಿಕೊಂಡಿದ್ದಳು: 'ನಾನು ಎರಡೂವರೆ ವರ್ಷಗಳ ಹಿಂದೆ ಮ್ಯೂಸೀ

ಗ್ಯೂಮೆಯಲ್ಲಿ ನೀಡಿದ ನೃತ್ಯ ಪ್ರದರ್ಶನದ ನಂತರ ತಾವೆಲ್ಲಾ ಪೌರಾತ್ಯ ನರ್ತಕಿಯರೆಂದು ಹೇಳಿಕೊಳ್ಳುವ, ನನ್ನನ್ನು ಅನುಕರಿಸುವ ನರ್ತಕಿಯರ ಹಿಂಡೇ ಹುಟ್ಟಿಕೊಂಡಿದೆ. ಅವರ ನೃತ್ಯಗಳೆಲ್ಲ ಸೌಂದರ್ಯೋಪಾಸನೆಯ ದೃಷ್ಟಿಯಿಂದ ಮತ್ತು ನರ್ತನ ನಿಯಮಗಳ ದೃಷ್ಟಿಯಿಂದ ಎಲ್ಲಾ ತಪ್ಪು ತಪ್ಪಾಗಿದೆ'. ಆದರೂ ಆಕೆ ತನ್ನ ರಂಗದಲ್ಲಿ 1905ರಿಂದ 1912 ರವರೆಗೂ ತನ್ನ ಆತ್ಮಸ್ಥೈರ್ಯದಿಂದ ಹಾಗೂ ಪ್ರಚಾರ ಪಡೆಯುವ ನಾಜೂಕುತನದಿಂದಾಗಿ ಮೆರೆದಳು. ಹಲವಾರು ಜನ ಆಕೆಗೆ ನರ್ತನವೇ ಗೊತ್ತಿಲ್ಲ, ಆಕೆಯದು ಬಾಲಿಶ ನರ್ತನ ಎಂದರೂ ಆಕೆ ಲೆಕ್ಕಿಸುತ್ತಿರಲಿಲ್ಲ. ಅವಕಾಶ ಸಿಕ್ಕಾಗಲೆಲ್ಲಾ ಪತ್ರಿಕೆಗಳ ಸಂದರ್ಶನಗಳಲ್ಲಿ ತನ್ನ ಹುಟ್ಟಿನ ಮೂಲವನ್ನು ವೈಭವೀಕರಿಸುತ್ತಿದ್ದಳು, ಒಮ್ಮೆ ಹಿಂದೂ ದೇವಾಲಯದ ನರ್ತಕಿಯ ಮಗಳೆಂದರೆ ಮತ್ತೊಮ್ಮೆ ತಾನು ಜಾವಾದ ರಾಜಕುಮಾರಿ ಎನ್ನುತ್ತಿದ್ದಳು, ಮಗದೊಮ್ಮೆ ತಾನು ಡಚ್‌ನ ರಾಜ ಮನೆತನದವಳು ಎನ್ನುತ್ತಿದ್ದಳು.

ನೃತ್ಯದಿಂದ ಗಳಿಸುವ ಹಣದಿಂದಲೇ ಆಕೆಯ ಜೀವನ ನಡೆಸಲು ಸಾಕಾಗುತ್ತಿರಲಿಲ್ಲ. ಸಂಗೀತಗಾರರಿಗೆ, ಉಡುಗೆ ತೊಡುಗೆಗೆ, ವೇದಿಕೆ ಸಜ್ಜುಗೊಳಿಸಲು ಹಣ ಸಾಕಷ್ಟು ಖರ್ಚಾಗುತ್ತಿತ್ತು. ಜಿಂಕೆಗಳನ್ನು ಸಾಕಿದಳು, ಕುದುರೆಗಳನ್ನು ಕೊಂಡಳು, ಸಾಕಷ್ಟು ಒಡವೆ ವಸ್ತ್ರ ಕೊಂಡಳು ಹಾಗೂ ಫ್ರಾನ್ಸ್‌ನ ನ್ಯೂಲ್ಲಿಯಲ್ಲಿ ಮನೆಯೊಂದನ್ನೂ ಸಹ ಕೊಂಡಳು. ಇದಕ್ಕೆಲ್ಲ ಹಣ ಅವಳ ಸಿರಿವಂತ ಇನಿಯರಿಂದಲೇ ಬರುತ್ತಿತ್ತು. ಅವರಲ್ಲಿ ಪ್ರಮುಖರಾದವರೆಂದರೆ, ಎರಡನೇ ಕೈಸರ್ ವಿಲ್‌ಹೆಲ್ಮ್‌ನ ಆಸ್ಥಾನದ ಫ್ರೆಂಚ್ ರಾಯಭಾರಿ ಜೂಲ್ಸ್ ಕ್ಯಾಂಬನ್, ಹುಸ್ಸಾರ್ಸ್‌ನ ಎರಡನೇ ರೆಜಿಮೆಂಟ್‌ನ ಕರ್ನಲ್ ಬ್ಯಾರನ್ ವಾನ್ ಡರ್ ಕ್ಯಾಪೆಲನ್, ಆಸ್ಟ್ರಾ ಕಾರ್ಪೊರೇಶನ್ನಿನ ನಿರ್ದೇಶಕ–ಯಜಮಾನ ಹೆನ್ರಿ ಕ್ಯಾಪ್‌ಫೆರರ್ ಮತ್ತು ಯೂರೋಪಿನ ಆಗಿನ ಪ್ರಖ್ಯಾತ ಪೈಲಟ್ ಮಾರ್ಕ್ವಿಸ್ ಡೆ ಬ್ಯೂಫೋರ್ಟ್. ಈ ಪಟ್ಟಿ ಮಾತಾ ಹರಿಯ ನೀಳ ಕೂದಲಿನಂತೆ ಉದ್ದವಾದುದು.

ಸಮವಸ್ತ್ರಧಾರಿ ಗಂಡಸರ ಬಗೆಗಿನ ಆಕೆಯ ಆಕರ್ಷಣೆ ವಿಚಿತ್ರವಾದುದು. ಆಕೆ ಮೊದಲಿಗೆ ಮದುವೆಯಾದ ರುಡಾಲ್ಫ್ ಸಹ ಮಿಲಿಟರಿಯವನು. ಆತನಲ್ಲಿ ಆಕೆ ತನ್ನ ಬದುಕಿನ ಅತ್ಯಂತ ಹತಾಶ ಸ್ಥಿತಿಯಲ್ಲಿ ವರಿಸಿದ್ದಳು, ಆತ ತನ್ನ ರಕ್ಷಕನಾಗುತ್ತಾನೆ ಎಂದು. ಆದರೆ ಈಗ ಆಕೆ ಇಷ್ಟಪಡುತ್ತಿದ್ದ ಸಮವಸ್ತ್ರಧಾರಿಗಳಲ್ಲಿ ಅವರು ಕೊಡುವ ಹಣದ ಬಗ್ಗೆ ಮಾತ್ರ ಆಕೆಗೆ ಆಸಕ್ತಿಯಿತ್ತು, ಇನ್ನುಳಿದಂತೆ ಯಾವುದೇ ಭಾವನಾತ್ಮಕ ಸಂಬಂಧಗಳು ಅವಳ ಬದುಕಿನಲ್ಲಿ ಅರ್ಥಹೀನವಾಗಿದ್ದವು.

5



ಮಾತಾ ಹರಿ ಆರ್ಥಿಕವಾಗಿ ಸಾಕಷ್ಟು ಸುಧಾರಿಸಿದ್ದಳು. ಸದಾ ಜೊತೆಯಲ್ಲಿ ಒಬ್ಬರಲ್ಲ ಮತ್ತೊಬ್ಬರು ಸಿರಿವಂತ ಗಂಡಸರು ಜೊತೆಗಿರುತ್ತಿದ್ದರು. ಅವಳಿಗೆ ತನ್ನ ಗಂಡನ ನೆನಪು ಕಾಡುತ್ತಿರಲಿಲ್ಲ. ಆತ ಆಕೆಗೆ ನೀಡಿದ್ದ ಮಾನಸಿಕ, ದೈಹಿಕ ಹಿಂಸೆ, ಯಾತನೆಗಳನ್ನು ಆಕೆ ಮರೆಯುವಂಥವಲ್ಲ. ಆದರೆ ಆಕೆಗೆ ಸದಾ ತನ್ನ ಮಗಳ ನೆನಪು ಕಾಡುತ್ತಿತ್ತು. ನೋನ್ ಈಗ ಹೇಗಿರಬಹುದು? ಅವಳಿಗೀಗ ಹದಿಮೂರು ವರ್ಷ, ಆಕೆ ಎಷ್ಟು ಬೆಳೆದಿರಬಹುದು, ಅವಳಿಗೂ ನನ್ನ ನೆನಪು ಬರುತ್ತಿರಬಹುದೆ? ಇಂಥದೇ ಹತ್ತು ಹಲವಾರು ಯೋಚನೆಗಳು ಮಾತಾ ಹರಿಯನ್ನು ಕಾಡುತ್ತಿದ್ದವು. ಗಂಡನ ಜೊತೆಗಿದ್ದಾಗ ಒಂದು ರೀತಿಯ ಹಿಂಸೆಯಾದರೆ, ಈಗ ಅವನನ್ನು ತೊರೆದ ನಂತರ ಮತ್ತೊಂದು ರೀತಿಯ ಹಿಂಸೆ. ಹಗಲೂ ರಾತ್ರಿ ತನ್ನ ಮಗಳ ಬಗ್ಗೆ ಚಿಂತಿಸುತ್ತಿದ್ದಳು, ಹೇಗಾದರೂ ಅವಳನ್ನು ಭೇಟಿಮಾಡಲು ತವಕಿಸುತ್ತಿದ್ದಳು. ಮಗಳಿಗಾಗಿ ಹಲವಾರು ಪತ್ರಗಳನ್ನು ಬರೆದಳು. ಆದರೆ ಆ ಪತ್ರಗಳ್ಯಾವುವೂ ನೋನ್‌ಳನ್ನು ತಲುಪಲೇ ಇಲ್ಲ. ರುಡಾಲ್ಫ್ ಅವುಗಳನ್ನು ತೆರೆದೂ ಸಹ ನೋಡದೆ, ಮಗಳಾದ ನೋನ್‌ಳ ಕೈಗೆ ಸಿಗದಂತೆ ಎಲ್ಲವನ್ನೂ ಮಾತಾ ಹರಿಗೇ ಹಿಂದಿರುಗಿಸುತ್ತಿದ್ದ.

ಮಾತಾ ಹರಿ ಎಷ್ಟು ಹತಾಶಳಾದಳೆಂದರೆ, ಹೇಗಾದರೂ ಮಾಡಿ ನೋನ್‌ಳನ್ನು ಭೇಟಿಯಾಗಲೇಬೇಕು ಎಂದು ನಿರ್ಧರಿಸಿದಳು. ಮಾತಾ ಹರಿಯ ಕೆಲಸಗಾರರಲ್ಲಿ ಆನಾ ಲಿಂಟ್‌ಜೆನ್ಸ್ ಎಂಬ ಯುವತಿಯಿದ್ದಳು. ಆಕೆಯೂ ಸಮಾಜದ ದೃಷ್ಟಿಯಲ್ಲಿ 'ಕೆಳಗೆ ಬಿದ್ದ' ಹೆಂಗಸಾಗಿದ್ದಳು. ಆನಾಳಿಗೆ ಮದುವೆಗೆ ಮೊದಲೇ ಮಗುವಾಗಿದ್ದುದರಿಂದ ಆಗಿನ ನಿಯಮಗಳಂತೆ ಆಕೆ ಮದುವೆಯಾಗುವಂತೆಯೇ ಇರಲಿಲ್ಲ. ಇಬ್ಬರೂ ಬದುಕಲ್ಲಿ ನೋವು ತಿಂದವರೇ ಆದುದರಿಂದಲೋ ಏನೊ

ಮಾತಾ ಹರಿ ಮತ್ತು ಆನಾ ಆತ್ಮೀಯರಾಗಿದ್ದರು. ಆನಾಳಲ್ಲಿ ಮಾತಾ ಹರಿ ತನ್ನ ಅಳಲು ತೋಡಿಕೊಂಡಳು. ಹೇಗಾದರೂ ತನ್ನ ಮಗಳನ್ನು ನೋಡಬೇಕು, ಅವಳೊಂದಿಗೆ ಕೆಲ ಕಾಲ ಕಳೆಯಬೇಕೆಂಬ ತನ್ನ ಆಸೆ ತೋಡಿಕೊಂಡಳು.

ತನ್ನ ಮಗಳನ್ನು ಭೇಟಿಯಾಗಲು ಮಾತಾ ಹರಿ ಯೋಜನೆಯೊಂದನ್ನು ರೂಪಿಸಿದಳು. ಅದರಂತೆ ರುಡಾಲ್ಫ್ ಮತ್ತು ನೋನ್ ವಾಸಿಸುತ್ತಿರುವ ವೆಲ್ಪ್ ನಗರಕ್ಕೆ ಆನಾ ಹೋಗುವುದು. ಅಲ್ಲಿ ನೋನ್‌ಳ ಶಾಲೆಯ ಬಳಿ ಹೋಗಿ ಆಕೆ ಶಾಲೆಯಿಂದ ಹೊರಬರುತ್ತಿರುವಂತೆ ಆಕೆಯನ್ನು ಭೇಟಿಮಾಡಿ ವಿಷಯ ತಿಳಿಸಿ, ಆಕೆಯನ್ನು ಕರೆದುಕೊಂಡು ಟ್ಯಾಕ್ಸಿಯೊಂದನ್ನು ಹಿಡಿದು ಆಮ್‌ಸ್ಟರ್‌ಡ್ಯಾಂ ತಲುಪಿ ಕೂಡಲೇ ಅಲ್ಲಿಂದ ಟ್ರೈನಿನಲ್ಲಿ ಪ್ಯಾರಿಸ್ ತಲುಪುವುದು. ಆ ಯೋಜನೆಯಂತೆ ಆನಾ ವೆಲ್ಪ್ ನಗರ ಸೇರಿದಳು. ನೋನ್ ಓದುತ್ತಿದ್ದ ಶಾಲೆಯನ್ನು ಗುರುತಿಸಿ ಶಾಲೆ ಬಿಡುವ ಸಮಯಕ್ಕಾಗಿ ಹೊರಗೆ ಕಾದುನಿಂತಳು. ಶಾಲೆಯ ಗಂಟೆ ಹೊಡೆದಂತೆ ನೋನ್ ಹೊರಬಂದಳು. ಆನಾ ಇನ್ನೇನು ಹೋಗಿ ಅವಳನ್ನು ಭೇಟಿಮಾಡಬೇಕು ಎನ್ನುವಷ್ಟರಲ್ಲಿ ರುಡಾಲ್ಫ್ ತನ್ನ ಮಗಳನ್ನು ಕರೆದೊಯ್ಯಲು ಅಲ್ಲಿಗೆ ಬಂದ. ಮಾತಾ ಹರಿ ಮತ್ತು ಆನಾಳ ಯೋಜನೆಯೆಲ್ಲಾ ತಲೆಕೆಳಗಾಯಿತು. ಹೇಗಾದರೂ ಮಾತನಾಡಿ ಮಗಳಿಗೆ ತಾಯಿಯ ವಿಷಯ ತಿಳಿಸೋಣವೆಂದು ಆನಾ ಹೋಗಿ ರುಡಾಲ್ಫ್‌ನನ್ನೇ ಮಾತನಾಡಿಸಿದಳು. ನೋನ್‌ಳಿಗಾಗಿ ಪ್ಯಾರಿಸ್ಸಿನಿಂದ ಉಡುಗೊರೆಯನ್ನು ತಂದಿರುವುದಾಗಿಯೂ, ಆಕೆಯೊಂದಿಗೆ ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿಕೊಂಡಳು. ಪ್ಯಾರಿಸ್ಸಿನಿಂದ ಎಂದಾಕ್ಷಣ ರುಡಾಲ್ಫ್‌ನಿಗೆ ಯಾರಿಂದ ಎಂಬುದು ತಿಳಿದುಹೋಯಿತು. ಕೂಡಲೇ ಆನಾಳನ್ನು ಬೈದು ಮತ್ತೆಂದೂ ಇಂತಹ ಸಾಹಸಕ್ಕೆ ಕೈ ಹಾಕಬೇಡವೆಂದು ತಿಳಿಸಿ ಓಡಿಸಿದ. ಆನಾ ಬರಿಗೈಲಿ ಹಿಂದಿರುಗಿದಳು; ಮಾತಾ ಹರಿಯ ಖಿನ್ನತೆ ಮತ್ತಷ್ಟು ಹೆಚ್ಚಾಯಿತು.

೬

ಆ ದಿನ 1914ರ ಮೇ 23. ಜರ್ಮನಿಯ ಸಂಗೀತ ಸಭಾಂಗಣವೊಂದರಲ್ಲಿ ಮಾತಾ ಹರಿಯ ನೃತ್ಯ ಪ್ರದರ್ಶನವಿತ್ತು. ಜನ ಎಂದಿನಂತೆ ಕಿಕ್ಕಿರಿದಿದ್ದರು. ಆಕೆಯ ನಗ್ನ ನೃತ್ಯವನ್ನು ಎಲ್ಲರೂ ಆನಂದಿಸಿದರು. ಆದರೆ ನಗ್ನತೆಯನ್ನು ನಿರೀಕ್ಷಿಸದ ಕೆಲವರಿಗೆ ಆಕೆಯ ನೃತ್ಯ ಅಶ್ಲೀಲವೆನ್ನಿಸಿತು. ಅವರು ಅಷ್ಟಕ್ಕೆ ಸುಮ್ಮನಾಗಲಿಲ್ಲ. ಕಾರ್ಯಕ್ರಮದ ಮಧ್ಯದಲ್ಲಿಯೇ ಹೋಗಿ ಪೋಲೀಸಿಗೆ

ದೂರು ನೀಡಿದರು. ಅಲ್ಲಿಗೆ ಬಂದ ಪೋಲೀಸ್ ಅಧಿಕಾರಿ ಗ್ರೀಬೆಲ್ ಮಾತಾಹರಿಯ ನೃತ್ಯ ನೋಡಿದ, ಮಬ್ಬುಗತ್ತಲಿನಲ್ಲಿನ ಆಕೆಯ ನಗ್ನ ದೇಹದ ಸೌಂದರ್ಯ ನೋಡಿ ಆವಾಕ್ಕಾದ. ಕಾರ್ಯಕ್ರಮ ಮುಗಿಯುವವರೆಗೂ ನೃತ್ಯ ನೋಡಿ ಆನಂದಿಸಿ ನಂತರ ಆಕೆಯನ್ನು ಭೇಟಿಯಾದ, ಆಕೆಯ ಸ್ನೇಹ ಬಯಸಿದ. ಆದರೆ ಕೆಲ ದಾಖಲೆಗಳು ಹೇಳುವಂತೆ ಗ್ರೀಬೆಲ್ ಚಿತ್ರದಲ್ಲೇ ಇಲ್ಲವೇ ಇಲ್ಲ, ಆತನ ಬದಲಿಗೆ ಆತನ ಹಿರಿಯ ಅಧಿಕಾರಿ ಟ್ರಾಗಟ್ ವಾನ್ ಜಾಗೊ ಮಾತಾ ಹರಿಯ ಗೆಳೆಯನಾಗುತ್ತಾನೆ. ಈ ವಾನ್ ಜಾಗೊ ಜರ್ಮನಿಯ ಬೇಹುಗಾರಿಕೆಯ ಮುಖ್ಯಸ್ಥನಾಗಿರುತ್ತಾನೆ. ಎಂದು ಮಾತಾ ಹರಿ ವಾನ್ ಜಾಗೋನ ಸಮವಸ್ತ್ರಕ್ಕೆ ಮರುಳಾದಳೋ ಅಂದೇ ಬೇಹುಗಾರಿಕೆಯ ಚಕ್ರವ್ಯೂಹಕ್ಕೆ ಸಿಲುಕಿಕೊಂಡಳು. ಇಲ್ಲಿಂದ ಮಾತಾ ಹರಿಯ ಬದುಕಿನ ದಾಖಲೆಗಳು ಎಲ್ಲವೂ ಅಸ್ಪಷ್ಟ

ವಾನ್ ಜಾಗೋನ ಸೂಚನೆಯಂತೆ ಮಾತಾ ಹರಿ ಬೆಲ್ಜಿಯಂನಲ್ಲಿನ ಆಂಟ್ವರ್ಪ್‌ನಲ್ಲಿನ ಬೇಹುಗಾರಿಕೆಯ ಶಾಲೆಗೆ ತರಬೇತಿಗೆ ಕಳುಹಿಸಲಾಯಿತು. ಜರ್ಮನಿಯ ಪರ ಆಕೆ ಫ್ರಾನ್ಸ್‌ನಲ್ಲಿ ಬೇಹುಗಾರಿಕೆ ಮಾಡಬೇಕಾಗಿತ್ತು. ಆಂಟ್ವರ್ಪ್‌ನ ಬೇಹುಗಾರಿಕೆಯ ತರಬೇತಿ ಶಾಲೆ ಬಹಳ ಕುಖ್ಯಾತವಾಗಿತ್ತು. ಅದನ್ನು ನಡೆಸುತ್ತಿದ್ದವಳು ಎಲ್ಸಬೆತ್ ಶ್ರ್ಯಾಗ್‌ಮುಲ್ಲರ್. ಎಲ್ಲರೂ ಅವಳನ್ನು ಫ್ರಾಲೀನ್ ಡಾಕ್ಟರ್ ಎಂದು ಕರೆಯುತ್ತಿದ್ದರು. ದಷ್ಟಪುಷ್ಟವಾಗಿದ್ದ ಆಕೆ ಅತ್ಯಂತ ಗಡಸು ಹೆಂಗಸಾಗಿದ್ದಳು. ಆಕೆ ತನ್ನ ಕಲ್ಲು ಹೃದಯ, ಅಸಾಧಾರಣ ದೈಹಿಕ ಶಕ್ತಿ ಸಾಮರ್ಥ್ಯಕ್ಕೆ ಹೆಸರಾಗಿದ್ದಳು. ದಿನವೊಂದಕ್ಕೆ ನಿರಂತರ ಇಪ್ಪತ್ತು ಗಂಟೆ ದುಡಿಯಬಲ್ಲ ಸಾಮರ್ಥ್ಯ ಆಕೆಗಿತ್ತು. ಆಕೆಯ ತರಬೇತಿ ಶಾಲೆಯಲ್ಲಿ ಕಠಿಣ ಶಿಸ್ತಿನ ನಿಯಮ ಪಾಲಿಸಬೇಕಾಗುತ್ತಿತ್ತು. ಆಕೆ ವಿಧಿಸುತ್ತಿದ್ದ ಶಿಸ್ತಿನ ನಿಯಮಗಳಿಂದಾಗಿ ಆಕೆಯನ್ನು 'ಕೆಂಪು ಹುಲಿ' ಮತ್ತು 'ಹುಲಿಯ ಕಣ್ಣವಳು' ಎಂದು ಕರೆಯುತ್ತಿದ್ದರು. ಮಾತಾ ಹರಿಯ ಮೇಲೆ ಬೇಹುಗಾರಿಕೆಯ ಆರೋಪ ಹೊರಿಸಿದವರು ಹೇಳುವಂತೆ ಆಕೆ ಇಲ್ಲಿ ಹದಿನೈದು ವಾರಗಳು ಬೇಹುಗಾರಿಕೆಯ ತರಬೇತಿ ಪಡೆದಳು ಹಾಗೂ ಅವಳಿಗೆ 'ಎಚ್ 21' ಎಂಬ ಸಂಕೇತದ ಹೆಸರು ನೀಡಲಾಯಿತು. ಅಲ್ಲಿ ಆಕೆಗೆ ಗೂಢಲಿಪಿಗಳು, ಸಂಕೇತಗಳು, ಅವುಗಳನ್ನು ಬಿಡಿಸುವ ಬಗೆ, ರಾಸಾಯನಿಕಗಳು, ಅವುಗಳ ಬಳಕೆ ಹಾಗೂ ತಯಾರಿಕೆ, ನಕ್ಷೆಗಳು, ಚಾರ್ಟ್‌ಗಳು ಹಾಗೂ ಫೋಟೋಗಳ ಅಧ್ಯಯನ, ಅವುಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದು, ಶತ್ರುಗಳು ಬಳಸುವ ಶಸ್ತ್ರಗಳ ಅಧ್ಯಯನ ಇತ್ಯಾದಿಗಳನ್ನು ಕಲಿಸಲಾಯಿತು. ದಡ್ಡ ಗೂಢಚಾರರು ಶತ್ರುಗಳ ಕೈಗೆ ಸಿಕ್ಕಿಹಾಕಿಕೊಂಡಲ್ಲಿ ಅವರಿಗೆ ಅಲ್ಲಿ ಸಿಗುವ ನಿರ್ದಯ ಶಿಕ್ಷೆಯ ಬಗ್ಗೆಯೂ ಹೇಳಿ ತೀವ್ರ ಎಚ್ಚರಿಕೆ ನೀಡಲಾಗಿತ್ತು.

ಇದೆಲ್ಲಾ ಎಷ್ಟರಮಟ್ಟಿಗೆ ಸತ್ಯ ಎಂಬುದು ಯಾರಿಗೂ ತಿಳಿದಿಲ್ಲ. ಸಾಂದರ್ಭಿಕ ಆಧಾರಗಳಂತೆ ಮಾತಾ ಹರಿ ಈ ಬೇಹುಗಾರಿಕೆ ಶಾಲೆಯಲ್ಲಿ ಕಾಲೇ ಇರಿಸಿರಲಿಲ್ಲ. ಆಕೆ ಸಾಯುವವರೆಗೂ ಅದನ್ನೇ ಹೇಳುತ್ತಿದ್ದಳು.

ಮೊದಲ ವಿಶ್ವಯುದ್ಧದ ಸಮಯವದು. ಫ್ರಾನ್ಸ್ ಮತ್ತು ಜರ್ಮನಿಯ ಮಧ್ಯೆ ಸಂಘರ್ಷ ಹೆಚ್ಚಾಗುತ್ತಿತ್ತು. ಯುದ್ಧ ಪ್ರಾರಂಭವಾದ ಎರಡು ದಿನಗಳಲ್ಲೇ ಆಕೆ 1914ರ ಆಗಸ್ಟ್ 4ರಂದು ಜರ್ಮನಿ ತೊರೆದು ಹೊರಟಳು. ಜರ್ಮನಿಯ ಪೋಲೀಸರು ಗುಮಾನಿಯಿಂದ ವಿದೇಶಿಯರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಿದ್ದರು. ಆಕೆ ಹಲವಾರು ವರ್ಷಗಳಿಂದ ಫ್ರಾನ್ಸ್‌ನಲ್ಲಿ ಇದ್ದುದರಿಂದ ಆಕೆಯನ್ನು ಫ್ರೆಂಚ್‌ನವಳೆಂದುಕೊಳ್ಳುತ್ತಾರೆಂದು ಹೆದರಿದ ಮಾತಾ ಹರಿ ಸ್ವಿಟ್ಜರ್‌ಲ್ಯಾಂಡ್‌ಗೆ ಹೋದಳು. ಅಲ್ಲಿ ಪಾಸ್‌ಪೋರ್ಟ್ ವಿಷಯದಲ್ಲಿ ತೊಂದರೆಗೆ ಸಿಲುಕಿ ಆಕೆಯನ್ನು ಮತ್ತೆ ಜರ್ಮನಿಗೇ ವಾಪಸ್ ಕಳುಹಿಸಲಾಯಿತು. ಅಲ್ಲಿಂದ ಆಮ್‌ಸ್ಟರ್‌ಡ್ಯಾಂಗೆ ಹೋದಳು. ಯುದ್ಧ ನಡೆಯುತ್ತಿರುವಂತೆ ಹಲವಾರು ಬಾರಿ ಪ್ಯಾರಿಸ್ ಮತ್ತು ಹಾಲೆಂಡ್ ಮಧ್ಯೆ ಓಡಾಡಬೇಕಾಯಿತು.

ಪ್ರೇಮದ ರಾಜಧಾನಿಯಾಗಿದ್ದ ಪ್ಯಾರಿಸ್ ಈಗ ಯುದ್ಧದ ರಾಜಧಾನಿಯಾಗಿತ್ತು. ಯುದ್ಧದ ಕರಾಳ ಛಾಯೆ ಇಡೀ ಯೂರೋಪನ್ನು ಆವರಿಸಿತ್ತು. ಪ್ರತಿಯೊಬ್ಬರೂ ಮತ್ತೊಬ್ಬರನ್ನು ಗುಮಾನಿಯಿಂದ ನೋಡುವಂತಾಗಿತ್ತು. ಎಲ್ಲಿ ತಮ್ಮ ನಡುವೆ ಗೂಢಚಾರರಿರುವರೋ ಎಂಬ ಸಂಶಯ, ಎಲ್ಲರನ್ನೂ ಕಾಡತೊಡಗಿತ್ತು. ಅಂತಹ ಅಪನಂಬಿಕೆಯ ವಾತಾವರಣದಲ್ಲಿ ಇತ್ತೀಚೆಗಷ್ಟೆ ಜರ್ಮನ್ ಇನಿಯನನ್ನು ಇಟ್ಟುಕೊಂಡಿದ್ದ ಮಾತಾ ಹರಿಯನ್ನು ಗುಮಾನಿಯಿಂದ ನೋಡತೊಡಗಿದರು. ಆಕೆ ಜರ್ಮನಿಗೆ ಬೇಹುಗಾರಿಕೆ ಮಾಡುತ್ತಿದ್ದಾಳೆ ಎಂದು ಫ್ರಾನ್ಸಿನ ಸೇನೆ ಮತ್ತು ಪೋಲಿಸ್‌ಗೆ ಸಂಶಯ ಬರತೊಡಗಿತು. ಆಕೆಯ ಚಲನವಲನಗಳ ಮೇಲೆ ನಿಗಾ ಇರಿಸತೊಡಗಿದರು. ಆಕೆ ಎಲ್ಲಿ ಹೋದರೂ ಹಿಂಬಾಲಿಸತೊಡಗಿದರು. ಇದು ಆಕೆಗೆ ತಿಳಿದು ಕಿರಿಕಿರಿಯಾಯಿತು, ಅತಿಯಾದ ಸಿಟ್ಟು ಬಂದಿತು.

ಆಕೆ ಅದುವರೆಗೂ ತನ್ನ ಬದುಕಿನಲ್ಲಿ ನಿಜವಾದ ಪ್ರೇಮವನ್ನು ಕಂಡಿದ್ದಳೆ? ಯಾರೂ ಆಕೆಯನ್ನು ಪ್ರೇಮಿಸಿ ಗೆಳೆಯರಾಗಲು ಮುಂದೆ ಬಂದಿರಲಿಲ್ಲ. ಮಬ್ಬುಗತ್ತಲಿನಲ್ಲಿ ಆಕೆಯ ನಗ್ನ ನೃತ್ಯ ನೋಡಿ ಮೋಹಗೊಂಡು ಆಕೆಯೊಂದಿಗೆ ಮಲಗಲು ಬಂದಿದ್ದವರು ಅಥವಾ ಪ್ರಖ್ಯಾತ ನರ್ತಕಿ ಮಾತಾ ಹರಿ ತಮ್ಮ ಇನಿಯಳು ಎಂದು ತೋರಿಸಿಕೊಳ್ಳಲು ಸಂತೋಷ ಕೂಟಗಳಿಗೆ ತಮ್ಮೊಂದಿಗೆ



ಕರೆದೊಯ್ಯಲು ಬಂದಿದ್ದ ಸೋಗಿನ ಸಿರಿವಂತರು. ಅಂತಹ ಬರಡು ಪ್ರೇಮದ ಮರಳುಗಾಡಿನಲ್ಲೂ ಆಕೆಗೊಂದು ಸಿಹಿನೀರ ಒರತೆ ಸಿಕ್ಕಿತು. ತನ್ನ ಪ್ರೇಮದಾಹವನ್ನು ತಣಿಸಿಕೊಳ್ಳಲು ಬಯಸಿದಳು. ಆತನಲ್ಲಿ ಪ್ರೇಮಿಯನ್ನು ಕಂಡಳೆ, ಇನಿಯನನ್ನು ಕಂಡಳೆ ಅಥವಾ ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸತ್ತು ಹೋಗಿದ್ದ ತನ್ನ ಮಗನನ್ನು ಕಂಡಳೆ?

ಆತನ ಹೆಸರು ವ್ಲಾದಿಮೀರ್ ಮಸ್ಲೋಫ್. ಆತ ಒಬ್ಬ ರಷಿಯನ್ ಅಧಿಕಾರಿ. ಆತನನ್ನು ಭೇಟಿಯಾದಾಗ ಆಕೆಗೆ ವಯಸ್ಸು ನಲವತ್ತು ವರ್ಷ ಹಾಗೂ ಆತನಿಗೆ ಇಪ್ಪತ್ತೊಂದು.

7

ಪ್ಯಾರಿಸ್ ಮೊದಲಿನಿಂದಲೂ ಪ್ರೇಮದ ನಗರವೆಂದೇ ಖ್ಯಾತಿಪಡೆದ ನಗರ. ಮಾತಾ ಹರಿ ತನಗೆ ಬುದ್ಧಿ ಬಂದಾಗಿನಿಂದಲೂ ಒಂದು ರೀತಿಯಲ್ಲಿ ಪ್ರೇಮದಿಂದ ವಂಚಿತಳಾದವಳೆಂದೇ ಹೇಳಬಹುದು. ಮದುವೆಯಾದ ಗಂಡನಿಂದ ಪ್ರೀತಿ, ಪ್ರೇಮ ಒಂದಿನಿತೂ ಸಿಗಲಿಲ್ಲ, ಗಂಡ ಕೊಡಬೇಕಾದ ರಕ್ಷಣೆ ನೀಡಲಿಲ್ಲ ಅಲ್ಲದೆ ಇದ್ದ ಒಬ್ಬ ಮಗಳನ್ನೂ ಕಸಿದುಕೊಂಡ. ಅಷ್ಟಕ್ಕೆ ಬಿಡದೆ ಅವಳಿಗೆ ಸಮಾಜದ ಬೆಂಬಲವೂ ಸಿಗದಂತೆ ಮಾಡಿದ. ಅವಳಿಗೆ ಬದುಕಲು ಬೇರ್‍ಯಾವ ದಾರಿಯೂ ಸಿಗದಿದ್ದಾಗ ಸರಿಯೋ ತಪ್ಪೋ ಧಾರ್ಮಿಕ ನೃತ್ಯದ ಹೆಸರಿನಲ್ಲಿ ತನ್ನ ದೇಹವನ್ನು, ಬದುಕನ್ನು ಅದನ್ನು ಬಯಸುವ ಗಂಡಸರಿಗೆ ಮಾರಾಟಕ್ಕಿಟ್ಟಳು. ಆದರೆ ಪುರುಷ ನಿಯಂತ್ರಿತ ಸಮಾಜ ಅದನ್ನು ಸೋಗಲಾಡಿತನವೆಂದಿತು, ಅವಳು ಬದುಕುವ ದಾರಿಯನ್ನು ಚಾಲಾಕಿತನವೆಂದಿತು. ಗಂಡಸಿನ ಮನಸ್ಸು ಅಂತಹ ಒಬ್ಬ ಹೆಣ್ಣಿನ ಬಗ್ಗೆ ಯಾವ ರೀತಿ ಆಲೋಚನೆ ಮಾಡುತ್ತದೆಂದು ಹೇಳುವುದು ಕಷ್ಟ. ಅವಳ 'ಚಾಲಾಕಿತನ'ದಿಂದಾಗಿ ಅವಳಿಗೆ ಗೂಢಚಾರಿಣಿ ಎಂಬ ಬಿರುದಿನ ಪಟ್ಟ ಕಟ್ಟಲು ಹೊರಟಿತ್ತು. ಅಂತಹ ಸಮಯದಲ್ಲಿ ಸಿಕ್ಕವನೇ ವ್ಲಾದಿಮೀರ್ ಮಸ್ಲೋಫ್. ಆತ ಒಬ್ಬ ರಷಿಯನ್ ಪೈಲಟ್. ಕಪ್ಪುಗೂದಲಿನ,

ತೆಳ್ಳನೆಯ ದೇಹದ, ಉದ್ದ ಮೂಗಿನ ವ್ಲದಿಮೀರ್ ಹಾಗೂ ಮಾತಾ ಹರಿಯ ಮಧ್ಯೆ ಪ್ರೇಮವುಂಟಾಯಿತು. ಆಕೆಗೆ ತನ್ನ ಬದುಕಿನಲ್ಲಿ ಅದುವರೆಗೂ ಇಲ್ಲದ ಪ್ರೇಮದ ಅವಶ್ಯಕತೆ–ಯಿತ್ತು, ಚಿಕ್ಕ ವಯಸ್ಸಿನಲ್ಲೇ ಇಲ್ಲವಾದ ಮಗನ ನೆನಪು ಕಾಡುತ್ತಿತ್ತು. ಇತ್ತ ವ್ಲದಿಮೀರ್‌ನಿಗೆ ಪ್ರಖ್ಯಾತ ಹೆಣ್ಣೊಬ್ಬಳು, ಫ್ರಾನ್ಸ್ ಹಾಗೂ ಜರ್ಮನಿಯ ಸಿರಿವಂತ ಕುಳಗಳು ಬಯಸುವ ಹೆಣ್ಣೊಬ್ಬಳು ತನ್ನನ್ನು ಪ್ರೇಮಿಸುತ್ತಿದ್ದಾಳೆ ಎನ್ನುವುದು ಗರ್ವದ ವಿಷಯ–ವಾಗಿತ್ತು. ಆಕೆಯ ಬದುಕಿನ ಆ ದಿನಗಳು ಬಹುಶಃ ಆಕೆ ಎಂದಿಗೂ ಮರೆಯಲಾಗದಂತಹ ದಿನಗಳು.

ಆದರೆ ಮಾತಾ ಹರಿಯ ಬದುಕಿನಲ್ಲಿ ಯಾವ ಸಂತೋಷವೂ ದೀರ್ಘವಾಗಿರಬಾರದು ಎಂದಿತ್ತೇನೋ, ವ್ಲದಿಮೀರ್‌ನಿಗೆ ಯುದ್ಧಕ್ಕೆ ಹೊರಡುವಂತೆ ಆದೇಶ ಬಂತು. ಯುದ್ಧದಲ್ಲಿ ಜರ್ಮನ್ನರ ಗ್ಯಾಸ್‌ಗೆ ಬಲಿಯಾಗಿ ತನ್ನ ಎಡಗಣ್ಣು ಕಳೆದುಕೊಂಡ.

ವಿಷಯ ತಿಳಿದ ಮಾತಾ ಹರಿ ಆಘಾತಕ್ಕೊಳಗಾದಳು. ತನ್ನ ಪ್ರೀತಿಯ ಯುವಕ ಅಪಘಾತಕ್ಕೊಳಗಾದನೆಂದು ತಿಳಿದು ರೋಧಿಸಿದಳು. ಆಕೆಯಲ್ಲಿ ಮಾತೃತ್ವದ ಸೆಲೆ ಬತ್ತಿರಲಿಲ್ಲ. ವ್ಲದಿಮೀರ್‌ನ ಮೇಲೆ ಪ್ರೇಮದ ಜೊತೆಗೆ ಅನುಕಂಪವೂ ಹೆಚ್ಚಾಯಿತು. ಆ ಸ್ಥಿತಿಯಲ್ಲಿ ಆತನಿಗೆ ಅನುಕಂಪ, ಸಾಂತ್ವನದ ಅವಶ್ಯಕತೆಯಿತ್ತು. ಆತನ ಮತ್ತೊಂದು ಕಣ್ಣಿಗೆ ಚಿಕಿತ್ಸೆಯ ಅವಶ್ಯಕತೆಯಿದೆ ಇಲ್ಲದಿದ್ದರೆ ಆತ ಸಂಪೂರ್ಣ ಕುರುಡನಾಗುವನೆಂದರು ವೈದ್ಯರು.

ಮಾತಾ ಹರಿ ತನ್ನ ಪ್ರಿಯಕರನನ್ನು ಉಳಿಸಿಕೊಳ್ಳಲು ಹಣ ಹೊಂದಿಸಲೇಬೇಕಾಗಿತ್ತು. ತನ್ನ ನೃತ್ಯ ಹಾಗೂ ದೇಹದ ಮಾರಾಟವನ್ನು ಇನ್ನಷ್ಟು ತೀವ್ರಗೊಳಿಸಿದಳು. ವ್ಲದಿಮೀರ್ ಇದ್ದ ಮಿಲಿಟರಿ ಆಸ್ಪತ್ರೆ ವಿಟ್ಟೆಲ್ ಎನ್ನುವ ಸ್ಥಳದಲ್ಲಿತ್ತು. ಆ ಸ್ಥಳ ಯುದ್ಧ ವಲಯದಲ್ಲಿದ್ದುದರಿಂದ ಅಲ್ಲಿಗೆ ಹೋಗಬಯಸುವ ಜನಸಾಮಾನ್ಯರು ವಿಶೇಷ ಅನುಮತಿ ಪಡೆಯಬೇಕಿತ್ತು. ಮಾತಾ ಹರಿ ವ್ಲದಿಮೀರ್‌ನನ್ನು ಭೇಟಿಯಾಗಲು ಅನುಮತಿ ಪಡೆಯಲು ಹೋದಾಗ ಪರಿಚಯವಾದವನೇ ಜಾರ್ಜ್ಸ್ ಲಡೂಕ್ಸ್. ಮಾತಾ ಹರಿಯ ಕೊನೆಗಾಲ ಆರಂಭವಾಗುವುದು ಅವನಿಂದಲೇ ಎಂದು ಆಕೆಗೆ ಆಗ ತಿಳಿದಿರಲಿಲ್ಲ. ಆತ ಒಬ್ಬ ಸೇನಾ ಕ್ಯಾಪ್ಟನ್ ಆಗಿದ್ದು ಫ್ರೆಂಚ್ ಬೇಹುಗಾರಿಕೆಯ ವಿಭಾಗ ಕಾರ್ಯವನ್ನು ನೋಡಿಕೊಳ್ಳುತ್ತಿದ್ದ. ಸದಾ ತಲೆಗೆ ಎಣ್ಣೆ ಹಚ್ಚಿಕೊಂಡು ಪೈಪ್ ಸೇದುತ್ತಾ ಇರುವ ಆತ ಠೊಣಪನಂತೆ ಇದ್ದ.

ಮಾತಾ ಹರಿ ಆಗಾಗಲೇ ಜರ್ಮನ್ ಗೂಢಚಾರಳೆಂಬ ಗಾಳಿಸುದ್ದಿ ಇದ್ದುದರಿಂದ ಆಕೆಗೆ ವಿಟ್ಟೆಲ್‌ಗೆ ಹೋಗಲು ಅನುಮತಿ ಸಿಗುವುದು ಕಷ್ಟವಾಗುತ್ತಿತ್ತು. ಕೆಲವರು ಜಾರ್ಜ್ಸ್ ಲಡೂಕ್ಸ್‌ನನ್ನು ಭೇಟಿಯಾಗಿ ತನ್ನ ಅಹವಾಲು ಹೇಳಿಕೊಳ್ಳುವಂತೆ ಸೂಚಿಸಿದರು. ಅದರಂತೆ ಆಕೆ ಭೇಟಿಯಾಗಿ ವ್ಲದಿಮೀರ್‌ನನ್ನು ನೋಡಲು ಹೋಗಲು ಅನುಮತಿ ನೀಡುವಂತೆ ಕೋರಿಕೊಂಡಳು. ಆತ ಆಕೆಯನ್ನು ತೀವ್ರವಾಗಿ ವಿಚಾರಣೆ ನಡೆಸಿದ. ಜರ್ಮನಿ ಮತ್ತು ಫ್ರಾನ್ಸ್‌ನ ಯುದ್ಧದ ಸಮಯದಲ್ಲಿ ಆಕೆಯ ನಿಲುವೇನೆಂದು ಕೇಳಿದ. ಅದಕ್ಕೆ ಆಕೆ ತಾನು ಡಚ್ ನಾಗರಿಕಳಾಗಿರುವುದರಿಂದ ತನ್ನ ನಿಲುವು ತಟಸ್ಥವಾದುದೆಂದೂ, ಅಲ್ಲದೆ ತನ್ನ ದೇಶ ಹಾಲೆಂಡ್ ಆ ಎರಡೂ ದೇಶಗಳ ಬಗ್ಗೆಯೂ ತಟಸ್ಥವಾಗಿರುವುದನ್ನು ತಿಳಿಸಿದಳು. ಆದರೆ ತನಗೆ ಫ್ರಾನ್ಸ್‌ನ ಬಗ್ಗೆ ಅನುಕಂಪ ಹಾಗೂ ಒಲವು ಇದೆಯೆಂದೂ ತಿಳಿಸಿದಳು. ಹಾಗಿದ್ದಲ್ಲಿ ಫ್ರಾನ್ಸ್‌ಗಾಗಿ ಆಕೆ ಜರ್ಮನ್ನರ ವಿರುದ್ಧ ಬೇಹುಗಾರಿಕೆ ಮಾಡಲು ಸಾಧ್ಯವೆ ಎಂದು ಜಾರ್ಜ್ಸ್ ಲಡೂಕ್ಸ್ ಕೇಳಿದ. ಮಾತಾ ಹರಿಗೆ ಏನು ಹೇಳಬೇಕೆಂದು ತೋಚಲಿಲ್ಲ. ಆತ ಅದರ ಬಗ್ಗೆ ಆಲೋಚಿಸುವಂತೆ ತಿಳಿಸಿದ ಹಾಗೂ ಬೇಹುಗಾರಿಕೆಗೆ ಸಾಕಷ್ಟು ಹಣವನ್ನೂ ಕೊಡುವುದಾಗಿ ತಿಳಿಸಿದ. ಆ ನಂತರ ಆಕೆಗೆ ವಿಟ್ಟೆಲ್‌ಗೆ ಹೋಗಲು ಅನುಮತಿ ಸಿಗುವುದೆಂದ.

ಮಾತಾ ಹರಿ ಆಲೋಚಿಸಿದಳು, ಬೇಹುಗಾರಿಕೆ ಅತ್ಯಂತ ಅಪಾಯಕಾರಿಯಾದುದು. ಆದರೆ ಆಕೆಗೆ ಮತ್ತು ವ್ಲದಿಮೀರ್‌ನಿಗೆ ಈಗ ಹಣದ ಅವಶ್ಯಕತೆಯಿತ್ತು. ಅಲ್ಲದೆ ಆಕೆಯೇ ಹೇಳಿದ್ದಂತೆ 'ಇತರ ಗಂಡಸರೊಂದಿಗೆ ಮಲಗಿ ತನ್ನ ವ್ಲದಿಮೀರ್‌ನಿಗೆ ಮೋಸಮಾಡುವುದನ್ನು' ನಿಲ್ಲಿಸಬೇಕಿತ್ತು. ಬೇಹುಗಾರಳಾಗಲು ನಿರ್ಧರಿಸಿದಳು. ಸದಾ ಬೇಹುಗಾರಳಾಗಲು ಆಕೆ ಸಿದ್ಧವಿರಲಿಲ್ಲ. ಯಾವುದಾದರೂ ಒಂದು ಪ್ರಮುಖ, ರಹಸ್ಯ ವಿಚಾರವನ್ನು ಜರ್ಮನ್ನರಿಂದ ಸಂಗ್ರಹಿಸಿ ಫ್ರಾನ್ಸ್‌ನವರಿಗೆ ನೀಡಿ ಅವರಿಂದ ದೊಡ್ಡ ಮೊತ್ತದ ಹಣ ಪಡೆದು ವ್ಲದಿಮೀರ್‌ನನ್ನು ಮದುವೆಯಾಗಿ ಎಲ್ಲಿಗಾದರೂ ದೂರ ಹೋಗಿ ಕತೆ ಕಾದಂಬರಿಗಳಲ್ಲಿ ಅಂತ್ಯವಾಗುವಂತೆ ಆ ನಂತರ ಸುಖ ಸಂತೋಷವಾಗಿ ಬದುಕಲು ಸಾಧ್ಯವಾಗಬಹುದೆಂಬ ಕನಸು ಕಂಡಳು.

ಜಾರ್ಜ್ಸ್ ಲಡೂಕ್ಸ್ ಮಾತಾ ಹರಿಗೆ ಯೋಜನೆಯೊಂದನ್ನು ರೂಪಿಸಿಕೊಟ್ಟ. ಆಕೆಗೆ ಬ್ರಸೆಲ್ಸ್‌ನಲ್ಲಿ ಜರ್ಮನ್ ಸೇನೆಗೆ ಆಹಾರ ಸರಬರಾಜುಮಾಡುವ ಕಂಪೆನಿಯ ಮಾಲೀಕನಾದ ವುರ್ಫಬೀನ್ ಎಂಬಾತ ಪರಿಚಯವಿದ್ದ. ಮಾತಾ ಹರಿ ಮುಂದಿನ ಸಾರಿ ಬ್ರಸೆಲ್ಸ್‌ಗೆ ಬಂದಾಗ ಆತ

ಜನರಲ್ ಮೋರಿಟ್ಸ್ ಫರ್ಡಿನಂಡ್ ವಾನ್ ಬಿಸ್ಸಿಂಗ್‌ಗೆ ಆಕೆಯನ್ನು ಪರಿಚಯ ಮಾಡಿಸುವುದಾಗಿ ಮೊದಲೊಮ್ಮೆ ಹೇಳಿದ್ದ. ಈ ಜನರಲ್ ಬಿಸ್ಸಿಂಗ್ ಬೆಲ್ಜಿಯಂ ಆಕ್ರಮಿಸಿಕೊಂಡಿರುವ ಜರ್ಮನ್ ಸೇನೆಯ ನಾಯಕ. ಈಗ ಮಾತಾ ಹರಿ ಬ್ರಸೆಲ್ಸ್‌ಗೆ ಹೋಗಿ ವುರ್ಫ್‌ಬೀನ್ ಮೂಲಕ ಜನರಲ್ ವಾನ್ ಬಿಸ್ಸಿಂಗ್‌ನನ್ನು ಪರಿಚಯಮಾಡಿಕೊಂಡು ಆತನನ್ನು ತನ್ನ ಬಲೆಗೆ ಬೀಳಿಸಿಕೊಳ್ಳಬೇಕು. ಆತನೊಂದಿಗಿನ ಅತ್ಯಂತ ಸನಿಹದ ಕ್ಷಣಗಳಲ್ಲಿ ಯಾವುದಾದರೂ ಮಿಲಿಟರಿ ರಹಸ್ಯವನ್ನು ಆತನ ಬಾಯಿಬಿಡಿಸಿ ತಿಳಿದುಕೊಳ್ಳಬೇಕು ಎಂಬ ಜಾರ್ಜ್ಸ್ ಲಡೂಕ್ಸ್‌ನ ಯೋಜನೆಯಂತೆ ಬೇಹುಗಾರಿಕೆ ಮಾಡಲು ನಿರ್ಧರಿಸಿದಳು. ಅಷ್ಟೇ ಅಲ್ಲದೆ ಆಕೆಗೆ ಬಹಳ ಹಿಂದೆ ಇದ್ದ ಜರ್ಮನಿಯ ರಾಜಕುಮಾರನೊಂದಿಗಿನ ಸ್ನೇಹವನ್ನು ಮತ್ತೆ ಸಚೇತನಗೊಳಿಸಿಕೊಳ್ಳುವ ಆಸೆಯನ್ನೂ ಹೊಂದಿದ್ದಳು.

ಯುದ್ಧದ ಸಮಯವಾಗಿದ್ದುದರಿಂದ ಆಕೆ ಬ್ರಸೆಲ್ಸ್‌ಗೆ ನೇರ ಪ್ರಯಾಣಿಸಲು ಸಾಧ್ಯವಾಗಲಿಲ್ಲ. ಆಕೆ ಸುತ್ತುಬಳಸಿನ ಹಾದಿ ಹಿಡಿಯಬೇಕಾಯಿತು. ಮೊದಲು ಆಕೆ ಸ್ಪೇನ್‌ಗೆ ಹೋಗಿ ಅಲ್ಲಿಂದ ಬ್ರಿಟನ್ ತಲುಪಿ ನಂತರ ತನ್ನ ದೇಶವಾದ ಹಾಲೆಂಡ್ ಮೂಲಕ ಅಂತಿಮವಾಗಿ ಬೆಲ್ಜಿಯಂ ಸೇರುವುದೆಂದು ತೀರ್ಮಾನಿಸಲಾಯಿತು. ಆದರೆ ಅವಳ ಹಾದಿ ಸುಗಮವಾಗಿರಲಿಲ್ಲ. ಬ್ರಿಟನ್ನಿನಲ್ಲೇ ಆಕೆ ತೊಂದರೆಗೆ ಸಿಕ್ಕಿಹಾಕಿಕೊಂಡಳು. ಆಕೆ ಜರ್ಮನ್ನರ ಗೂಢಚಾರಿಣಿಯೆಂದು ಬ್ರಿಟಿಷರಿಗೆ ಗುಮಾನಿಯಿತ್ತು. ಅಲ್ಲದೆ ಅವರು ಜರ್ಮನ್ ಗೂಢಚಾರಿಣಿಯಾಗಿದ್ದ ಕ್ಲಾರಾ ಬೆನೆಡಿಕ್ಸ್ ಎಂಬಾಕೆಯನ್ನು ಹಿಡಿಯಲು ಹದ್ದಿನ ಕಣ್ಣಿನಲ್ಲಿ ಕಾಯುತ್ತಿದ್ದರು. ಮಾತಾ ಹರಿಯ ದುರಂತವೆಂದರೆ ಆಕೆ ಕ್ಲಾರಾ ಬೆನೆಡಿಕ್ಸ್‌ಳನ್ನು ಹೋಲುತ್ತಿದ್ದಳು. ಮಾತಾ ಹರಿಯಾಗಿದ್ದ ಮಾರ್ಗರೇತಾ ಝೆಲ್ಲೆಯ ಮತ್ತೊಂದು ಹೆಸರು ಕ್ಲಾರಾ ಬೆನೆಡಿಕ್ಸ್ ಎಂದು ನಿರ್ಧರಿಸಿದ ಬ್ರಿಟಿಷರು ಮಾತಾ ಹರಿಯಿದ್ದ ದೋಣಿ ಬಂದರು ತಲುಪುತ್ತಿದ್ದಂತೆ ಅವಳನ್ನು ಬಂಧಿಸಿದರು.

ಗಾಭರಿಯಾಗಿದ್ದ ಮಾತಾ ಹರಿಯನ್ನು ಸ್ಕಾಟ್‌ಲೆಂಡ್‌ಯಾರ್ಡ್‌ಗೆ ವಿಚಾರಣೆಗೆ ಕರೆದೊಯ್ದರು. ತಾನು ಕ್ಲಾರಾ ಬೆನೆಡಿಕ್ಸ್ ಅಲ್ಲ ಎಂದು ಪರಿಪರಿಯಾಗಿ ವಾದಿಸಿದಳು, ಕೇಳಿಕೊಂಡಳು. ಬ್ರಿಟಿಷ್ ಅಧಿಕಾರಿಗಳು ಫ್ರಾನ್ಸ್‌ನ ಜಾರ್ಜ್ಸ್ ಲಡೂಕ್ಸ್‌ಗೆ ಪತ್ರ ಬರೆದರು. ಆತ ಆಕೆಯನ್ನು ಸ್ಪೇನ್‌ಗೆ ಹಿಂದಿರುಗಿಸುವಂತೆ ಹೇಳಿದ. ಸೋತು ಬಸವಳಿದ ಹಾಗೂ ಸಿಟ್ಟುಗೊಂಡಿದ್ದ ಮಾತಾ ಹರಿ ಸ್ಪೇನ್‌ಗೆ ಹಿಂದಿರುಗಿದಳು. ಆಕೆಯ ಪರಿಸ್ಥಿತಿ ಹೇಗಿತ್ತೆಂದರೆ ಆಕೆಗೆ ಯಾವುದೇ ಸೂಚನೆಗಳಿರಲಿಲ್ಲ, ಹಣದ ತುರ್ತು ಅವಶ್ಯಕತೆಯಿತ್ತು, ಹಾಲೆಂಡಿನ ಮೂಲಕ

ಬೆಲ್ಜಿಯಂಗೆ ಹೋಗಿ ಜನರಲ್ ವಾನ್ ಬಿಸ್ಸಿಂಗ್‌ನನ್ನು ಭೇಟಿಮಾಡಲು ಸಾಧ್ಯವೇ ಇರಲಿಲ್ಲ.

ಕೊರೆಯುವ ಚಳಿಯ 1916ರ ಡಿಸೆಂಬರ್ ಅದು. ಆಕೆ ಜರ್ಮನ್ ಏಜೆಂಟಳಾಗಿದ್ದಳು ಎಂದು ನಂಬುವವರು ಆಕೆಗೆ ಸೂಚನೆ ಕೊಡುತ್ತಿದ್ದ ಲೆಫ್ಟಿನೆಂಟ್ ವಿಲ್ಹೆಲ್ಮ್ ಕೆನರೀಸ್‌ನನ್ನು ಮ್ಯಾಡ್ರಿಡ್‌ನಲ್ಲಿ ಭೇಟಿಯಾದಳು ಎನ್ನುತ್ತಾರೆ. ಇತರರು ಆಕೆ ಆತನನ್ನು ಎಂದಿಗೂ ಭೇಟಿಯಾಗಲೇ ಇಲ್ಲವೆನ್ನುತ್ತಾರೆ.

ಆದರೆ ಆಕೆ ಮತ್ತೊಬ್ಬ ಜರ್ಮನ್ ಮೇಜರ್ ಅರ್ನಾಲ್ಡ್ ಕಲ್ಲೆಯನ್ನು ಭೇಟಿಯಾಗಿದ್ದಂತೂ ನಿಜ ಹಾಗೂ ಆತನೊಂದಿಗೆ ಸಂಬಂಧ ಇರಿಸಿಕೊಂಡಿದ್ದೂ ನಿಜ. ಆತನ ಬಾಯಿಂದ ಫ್ರೆಂಚನವರಿಗೆ ಉಪಯೋಗವಾಗುವಂತಹ ಏನಾದರೂ ಮಾಹಿತಿ ಪಡೆಯಲು ಬಹಳಷ್ಟು ಯತ್ನಿಸಿದಳು. ಅಂತಹ ಮಾಹಿತಿ ದೊರೆತಲ್ಲಿ ಅವರು ತನಗೆ ಹಣ ನೀಡುವುದು ಖಚಿತವೆಂದು ಕನಸು ಕಂಡಳು. ಮಾತಾ ಹರಿಯನ್ನು ಚೆನ್ನಾಗಿ ಬಳಸಿಕೊಂಡ ಅರ್ನಾಲ್ಡ್ ಕಲ್ಲೆ, ಮೊರೊಕ್ಕೋನಲ್ಲಿನ ಫ್ರೆಂಚ್ ವಲಯದಲ್ಲಿ ಕೆಲವು ಜರ್ಮನ್ ಮತ್ತು ಟರ್ಕಿಶ್ ಅಧಿಕಾರಿಗಳನ್ನು ಕಳುಹಿಸಲು ಒಂದು ಸಬ್‌ಮರೀನ್ ವ್ಯವಸ್ಥೆ ಮಾಡುತ್ತಿರುವುದಾಗಿ ಹೇಳಿ ಅದೊಂದು ಬಹಳ ಗುಪ್ತ ಮಾಹಿತಿ ಎನ್ನುವಂತೆ ತಿಳಿಸಿದ. ಅದಕ್ಕೆ ಬದಲಾಗಿ ಆಕೆ ಅರ್ನಾಲ್ಡ್ ಕಲ್ಲೆಗೆ ಕೆಲವು ಫ್ರೆಂಚ್ ಮಾಹಿತಿಯನ್ನು ನೀಡಿದಳು. ಆದರೆ ಆಕೆ ನೀಡಿದ ಮಾಹಿತಿಯೆಲ್ಲಾ ಫ್ರೆಂಚ್ ಬಗೆಗಿನ ದಿನಪತ್ರಿಕೆಗಳಲ್ಲಿದ್ದ ಸಮಾಚಾರವೇ!

ತನಗೆ ದೊರೆತ ಮಾಹಿತಿಯನ್ನು ಜಾರ್ಜ್ಸ್ ಲಡೂಕ್ಸ್‌ಗೆ ಪತ್ರ ಬರೆದು ತಿಳಿಸಿದಳು. ಆದರೆ ಆತನಿಗೆ ಇದು ಹಳಸಲು ಮಾಹಿತಿಯೆಂದು ತಿಳಿದಿತ್ತು. ಅರ್ನಾಲ್ಡ್ ಕಲ್ಲೆಯನ್ನು ಮತ್ತೊಮ್ಮೆ ಭೇಟಿಯಾದಾಗ ಆತ ಮಾತಾ ಹರಿಯ ಮೇಲೆ ಹರಿಹಾಯುವ ನಾಟಕವಾಡಿದ. ತಾನು ನೀಡಿದ ಮಾಹಿತಿಯನ್ನು ಆಕೆ ಫ್ರೆಂಚ್‌ನವರಿಗೆ ಕಳುಹಿಸಿರುವುದಾಗಿಯೂ ಹಾಗೂ ಅವರ ರೇಡಿಯೋ ಸಂಕೇತಗಳ ಕೀಲಿ ತಮ್ಮಲ್ಲಿದೆಯೆಂಬ ಸುಳ್ಳೂ ಹೇಳಿದ.

ಮಾತಾ ಹರಿ ಪ್ಯಾರಿಸ್‌ಗೆ ಹಿಂದಿರುಗಬೇಕಾಗಿತ್ತು. ಅಲ್ಲಿ ಲಡೂಕ್ಸ್ ತಾನು ಈಗಾಗಲೇ ಕೊಟ್ಟಿರುವ ಮಾಹಿತಿಯಿಂದ ಸಂತೋಷಗೊಂಡು ತನಗೆ ಹೇಳಿದ್ದಂತೆ ಹಣಕೊಡುವವನು ಎಂದು ನಂಬಿದ್ದಳು. ಆದರೆ ಪ್ಯಾರಿಸ್‌ಗೆ ಹಿಂದಿರುಗಿದ ಮಾತಾ ಹರಿಗೆ ಆಘಾತ ಕಾದಿತ್ತು.

೮

ಮಾತಾ ಹರಿ ಪ್ಯಾರಿಸ್ಸಿನಲ್ಲ ಜಾರ್ಜ್ಸ್ ಲಡೂಕ್ಸ್‌ನನ್ನು ಭೇಟಿಯಾಗಲು ಹೋದಳು. ಆದರೆ ಆತ ಆಕೆಯನ್ನು ಭೇಟಿಯಾಗಲು ನಿರಾಕರಿಸಿದ. ಅವಳು ಭೇಟಿಯಾಗಲೇಬೇಕೆಂದು ಪಟ್ಟುಬಿಡದೆ ನಿಂತಾಗ ಕೊನೆಗೆ ಆತ ಭೇಟಿಮಾಡಿದರೂ ಆಕೆಗೆ ಯಾವುದೇ ಹಣ ಕೊಡಲು ನಿರಾಕರಿಸಿದ. ಆಕೆ ಕಳುಹಿಸಿದ್ದ ಮಾಹಿತಿ ನಿಷ್ಪ್ರಯೋಜಕವಾದುದೆಂದೂ, ಅದು ಮೊದಲೇ ಅವರಿಗೆ ತಿಳಿದಿತ್ತೆಂದು ತಿಳಿಸಿದ. ಆಕೆ ಬೇಹುಗಾರಿಕೆಯಿಂದ ಹಣ ಸಂಪಾದಿಸಬೇಕೆಂದಿದ್ದಲ್ಲಿ ಇನ್ನೂ ಹೆಚ್ಚಿನ ಕೆಲಸ ಮಾಡಬೇಕೆಂದೂ, ಇನ್ನೂ ಹೆಚ್ಚಿನ ಮೌಲ್ಯದ ಮಾಹಿತಿ ಸಂಗ್ರಹಣೆ ಮಾಡಬೇಕೆಂದೂ ತಿಳಿಸಿದ. ಹಣವನ್ನು ಪಡೆದು ವ್ಲದಿಮೀರ್‌ನಿಗೆ ಚಿಕಿತ್ಸೆ ಕೊಡಿಸಿ ಎಲ್ಲಾದರೂ ದೂರ ಹೋಗಿಬಿಡೋಣವೆಂದುಕೊಂಡು ಬಂದಿದ್ದ ಮಾತಾ ಹರಿಗೆ ಅತೀವ ನಿರಾಸೆಯಾಯಿತು. ಆದರೆ ಆಕೆಗೆ ಹಣದ ತೀರಾ ಅವಶ್ಯಕತೆಯಿತ್ತು. ತನ್ನ ಮುಂದಿನ ಆದೇಶಕ್ಕಾಗಿ ಕಾಯಲು ಪ್ರಾರಂಭಿಸಿದಳು.

ಅಷ್ಟರಲ್ಲಿ ಜರ್ಮನಿಯ ಕಲ್ಲೆ ಮತ್ತು ಆತನ ಸಹೋದ್ಯೋಗಿಗಳು ಕಳುಹಿಸಿದ್ದ ಒಂದು ಸಂದೇಶದ ಬಗ್ಗೆ ಲಡೂಕ್ಸ್ ಚಿಂತಿಸಲಾರಂಭಿಸಿದ. ಅದರಲ್ಲಿ 'ಎಚ್ 21' ಏಜೆಂಟ್ ಒದಗಿಸುತ್ತಿರುವ ಮಾಹಿತಿ ಅಂತಹ ಉಪಯೋಗವೇನೂ ಆಗುತ್ತಿಲ್ಲ, ಆಕೆಗೆ ಕೊಡುತ್ತಿರುವ ಹಣ ಹೆಚ್ಚಾಗಿದೆ; ಆಕೆಗೆ ಫ್ರಾನ್ಸ್‌ನ ಬ್ಯಾಂಕೊಂದರಿಂದ 5000 ಫ್ರಾಂಕ್ ಕೊಟ್ಟು ಆಕೆಯನ್ನು ಪ್ಯಾರಿಸ್ಸಿಗೆ ಹಿಂದಿರುಗಿಸುವಂತೆ ಹೇಳಲಾಗಿತ್ತು. ಅಂದರೆ 'ಎಚ್ 21' ಎನ್ನುವ ಮಾತಾ ಹರಿ ಫ್ರಾನ್ಸ್‌ಗೆ ಬೇಹುಗಾರಿಕೆ ಆರಂಭಿಸುವ ಮುನ್ನ ಜರ್ಮನ್ನರ ಗೂಢಚಾರಳಾಗಿದ್ದಳೆ? ಮಾತಾ ಹರಿಯ ಈ ಸಂಕೇತ ಹೆಸರನ್ನು ಜರ್ಮನ್ನರು ಗುರುತಿಸಿರುವರೆಂಬುದು ಫ್ರೆಂಚರಿಗೆ ಆತಂಕದ ವಿಷಯವಾಗಿತ್ತು.

ಆದರೆ ಇದು ಜರ್ಮನ್ನರ ನಾಟಕವಾಗಿತ್ತು. ಫ್ರೆಂಚ್‌ನವರಿಗೆ ತಿಳಿಯಲೆಂದೇ ಅವರು 'ಎಚ್ 21' ಎನ್ನುವ ಸಂಕೇತದ ಹೆಸರಿನ ಸಂದೇಶ ಕಳುಹಿಸಿದ್ದರು. ಅದು ಫ್ರೆಂಚರ ಕೈಗೆ ಸಿಗಲಿ ಹಾಗೂ ಮಾತಾ ಹರಿ ಡಬಲ್ ಏಜೆಂಟ್ ಎಂದು ತಿಳಿದು ಆಕೆಯನ್ನು ಅವರೇ ಮುಗಿಸಿಬಿಡಲಿ ಎಂಬುದು ಜರ್ಮನ್ನರ ಉದ್ದೇಶವಾಗಿತ್ತು.

ಮೊದಲೇ ಎಲ್ಲರನ್ನೂ ಸಂಶಯದಿಂದ ನೋಡುತ್ತಿದ್ದ ಫ್ರೆಂಚರು ತಮ್ಮ ನಡುವೆಯೇ ಗೂಢಚಾರರಿರುವರೆಂಬ ಆತಂಕದಲ್ಲಿ ಬದುಕುತ್ತಿದ್ದರು. ಅವರಿಗೆ ಮಾತಾ ಹರಿ ಸುಲಭದ ಬಲಿಪಶುವಾದಳು. ತಮಗೆ ನಂಬಿಸಿ ಜರ್ಮನ್ನರಿಗೆ ಬೇಹುಗಾರಿಕೆ ಮಾಡುತ್ತಿರುವ ಮಾತಾ ಹರಿ ಡಬಲ್ ಏಜೆಂಟ್ ಎಂಬುದು ಅವರ ದೃಢವಾದ ನಂಬಿಕೆಯಾಗಿತ್ತು.

ಮಾತಾ ಹರಿ ಪ್ಯಾರಿಸ್ಸಿನ ಅವೆನ್ಯೂ ಮೋಂಟೇನ್‌ನಲ್ಲಿನ ಹೋಟೆಲ್ ಪ್ಲಾಜಾ ಅಥೆನೀನಲ್ಲಿ ಉಳಿದುಕೊಂಡಿದ್ದಳು. 1917ರ ಫೆಬ್ರುವರಿ 13ರಂದು ಫ್ರೆಂಚ್ ಸೀಕ್ರೆಟ್ ಸರ್ವೀಸ್ ಅಧಿಕಾರಿಗಳು ಮಾತಾ ಹರಿಯನ್ನು ಜರ್ಮನ್ ಡಬಲ್ ಏಜೆಂಟ್ ಎಂಬ ಆರೋಪದ ಮೇಲೆ ಬಂಧಿಸಿದರು. ಜರ್ಮನ್ ಸಂದೇಶದಲ್ಲಿದ್ದಂತೆಯೇ ಆಕೆಯ ಬಳಿ 5000 ಫ್ರಾಂಕ್‌ನ ಚೆಕ್ ಒಂದಿತ್ತು ಹಾಗೂ ಆಕೆಯ ಬಳಿ ಇದ್ದ ದ್ರವದ ಸೀಸೆಯೊಂದನ್ನು ರಹಸ್ಯ ಸಂದೇಶ ಕಳುಹಿಸುವ ಅದೃಶ್ಯ ಇಂಕ್ ಎಂದು ಅದನ್ನೂ ಜಫ್ತು ಮಾಡಿದರು.

ಕ್ಯಾಪ್ಟನ್ ಪಿಯರ‍್ರೆ ಬೋಷಾರ್ಡನ್ ಎಂಬ ಮಿಲಿಟರಿ ಪ್ರಾಸಿಕ್ಯೂಟರ್ ಆಕೆಯನ್ನು ಸತತ ವಿಚಾರಣೆಗೊಳಪಡಿಸಿದ. ಆಕೆಯ ಬಳಿ ಬೇಹುಗಾರಿಕೆಗೆ ಸಂಬಂಧಪಟ್ಟಂತೆ ಹೇಳುವುದೇನೂ ಇರಲಿಲ್ಲ. ತಾನು ಡಬಲ್ ಏಜೆಂಟ್ ಅಲ್ಲವೆಂದು ಸಾರಿ ಸಾರಿ ಹೇಳಿದಳು. ಫ್ರೆಂಚ್ ಬೇಹುಗಾರಿಕೆಯವರು ತನಗೆ ಬೇಹುಗಾರಿಕೆ ಮಾಡಲು ಹೇಳಿದ್ದರು, ಅದರ ಪ್ರಯತ್ನವಷ್ಟೇ ನಡೆಸಿದ್ದೆ ಎಂದಳು. ಆಕೆಯ ಬಳಿ ಇದ್ದ 5000 ಫ್ರಾಂಕ್‌ನ ಚೆಕ್ ಬಗ್ಗೆ ವಿಚಾರಿಸಿದಾಗ, ಅದು ತನ್ನ ಲೈಂಗಿಕ ಸೇವೆಗಾಗಿ ಜರ್ಮನ್ ಅಧಿಕಾರಿಯೊಬ್ಬ ನೀಡಿದ ಹಣ, ಯಾವುದೇ ಬೇಹುಗಾರಿಕೆಗಲ್ಲ ಎಂದಳು. 'ಅದೃಶ್ಯ ಇಂಕ್' ಬಗ್ಗೆ ವಿಚಾರಿಸಿದಾಗ, ಅದು ಯಾವುದೇ ಇಂಕ್ ಅಲ್ಲವೆಂದೂ ಅದು ಗರ್ಭನಿರೋಧಕವಾಗಿ ಬಳಸುವ ವೀರ್ಯಾಣು ನಾಶಕ ದ್ರವವೆಂದಳು. 'ಯಾರೋ ನನ್ನ ಬದುಕಿನೊಂದಿಗೆ ಆಟವಾಡುತ್ತಿದ್ದಾರೆ, ನಾನು ನಿರಪರಾಧಿ' ಎಂದಳು.

೯

ಆಕೆಯನ್ನು ಸೇಂಟ್ ಲಜಾರೆ ಬಂಧಿಖಾನೆಯ ಕೋಣೆ 12ರಲ್ಲಿಡಲಾಯಿತು. ಈ ಮೊದಲು ಆ ಕೋಣೆಯಲ್ಲಿ ಫ್ರೆಂಚ್ ಅಧ್ಯಕ್ಷರನ್ನು

ಹತ್ಯೆ ಮಾಡಿದ್ದ ಒಬ್ಬ ಸ್ತ್ರೀಯನ್ನು ಹಾಗೂ ಗೂಢಚಾರಿಣಿಯೆಂದು ಸರ್ಕಾರ ಕೊಂದುಹಾಕಿದ್ದ ಪ್ರಖ್ಯಾತ ವೃತ್ತ ಪತ್ರಿಕೆಯ ಸಂಪಾದಕಿಯಾಗಿದ್ದ ಮಾರ್ಗರೆಟ್



ಫ್ರಾನ್ಸಿಲ್ಲಾರ್ಡ್‌ರನ್ನು ಇರಿಸಲಾಗಿತ್ತು. ಅತ್ಯಂತ ಗಲೀಜಿನ, ಇಕ್ಕಟ್ಟಾದ ಬಂಧಿಖಾನೆಯ ಕೋಣೆಯದು. ಅದರಲ್ಲಿ ಬಚ್ಚಲುಮನೆಯೇ ಇರಲಿಲ್ಲ. ಸದಾ ತನ್ನ ಸ್ವಚ್ಛತೆಯ ಬಗ್ಗೆ ಹೆಚ್ಚು ಆಸಕ್ತಿ ವಹಿಸುತ್ತಿದ್ದ ಮಾತಾ ಹರಿಗೆ ಅಲ್ಲಿ ದಿನಗಳನ್ನು ಕಳೆಯುವುದೇ ಕಷ್ಟವಾಯಿತು. ಸ್ನಾನಕ್ಕೆಂದು ಒಂದು ಬಟ್ಟಲು ನೀರುಕೊಡುತ್ತಿದ್ದರು. ಆಕೆಯ ಬಂಧನವನ್ನು ರಹಸ್ಯವಾಗಿಡಲಾಗಿತ್ತು. ಆಕೆ ಬೇರೆಯ ಖೈದಿಗಳನ್ನು ಭೇಟಿಮಾಡಲು ಅವಕಾಶವೇ ಕೊಡುತ್ತಿರಲಿಲ್ಲ, ಆಕೆಯನ್ನು ಒಂಟಿಯಾಗಿ ಕೂಡಿಹಾಕಿದ್ದರು. ಅದು ಆಕೆಯ ರಕ್ಷಣೆಗೇ ಎಂದರು ಬಂಧಿಖಾನೆಯ ಅಧಿಕಾರಿಗಳು. ಇತರ ಖೈದಿಗಳು ಆಕೆ ಜರ್ಮನ್ ಗೂಢಚಾರಳೆಂದು ಆಕೆಯ ಮೇಲೆ ಆಕ್ರಮಣ ಮಾಡಬಹುದೆಂದರು. ಆಕೆಗೆ ಬಟ್ಟೆ ಬದಲಿಸಲು ಅವಕಾಶವೇ ಇರಲಿಲ್ಲ. ದಿನವೊಂದಕ್ಕೆ ಹದಿನೈದು ನಿಮಿಷ ಮಾತ್ರ ಹೊರಗೆ ಓಡಾಡಲು ಬಿಡುತ್ತಿದ್ದರು, ಅದೂ ಒಂಟಿಯಾಗಿಯೇ. ವ್ಲದಿಮೀರ್ ಅಥವಾ ಮತ್ತಾರಿಗೂ ಪತ್ರ ಬರೆಯಲೂ ಅವಕಾಶ ಕೊಡುತ್ತಿರಲಿಲ್ಲ. ವಿಚಾರಣೆಯ ಮಧ್ಯದ ದಿನಗಳಲ್ಲಿ ಸಮಯ ಸಿಕ್ಕಾಗಲೆಲ್ಲ ಪ್ರತಿಭಟಿಸಿ ಬೋಷಾರ್ಡನ್‌ಗೆ ಪತ್ರಗಳನ್ನು ಬರೆಯುತ್ತಿದ್ದಳು– "ನಾನೆಂದೂ ಅನುಭವಿಸದ ಹಿಂಸೆಯನ್ನು ನೀವಿಲ್ಲಿ ನನಗೆ ನೀಡುತ್ತಿದ್ದೀರಿ. ನಾನು ಹುಚ್ಚಿಯಾಗಿದ್ದೇನೆ. ನಾನೊಬ್ಬಳು ಹೆಂಗಸು. ಇನ್ನು ನನ್ನಿಂದ ತಡೆಯಲು ಸಾಧ್ಯವೇ ಇಲ್ಲ. ನಾನು ನಿರಪರಾಧಿ. ಫ್ರಾನ್ಸ್ ವಿರುದ್ಧ ನಾನು ಯಾವುದೇ ಬೇಹುಗಾರಿಕೆ ಮಾಡಿಲ್ಲ. ನಾನು ನಿಮ್ಮನ್ನು ಬೇಡಿಕೊಳ್ಳುತ್ತೇನೆ ಈ ಅಸಹ್ಯದ ಸೆರೆಮನೆಯಿಂದ ನನ್ನನ್ನು ಮುಕ್ತಗೊಳಿಸಿ. ನನ್ನನ್ನು ಹಿಂಸಿಸಬೇಡಿ." ಆದರೆ ಆಕೆಯ ಪ್ರತಿಭಟನೆಗೆ ಯಾವುದೇ ಪ್ರತಿಕ್ರಿಯೆ ಇರುತ್ತಿರಲಿಲ್ಲ.

ಆಕೆಯನ್ನು ಪ್ರತಿದಿನವೂ ಭೇಟಿಯಾಗಲು ಒಬ್ಬ ವ್ಯಕ್ತಿಯನ್ನು ಮಾತ್ರ ಬಿಡುತ್ತಿದ್ದರು. ಆತ ಆಕೆಯ ವಕೀಲ ಹಾಗೂ ಮಾಜಿ ಪ್ರಿಯಕರ ಎಡ್ವರ್ಡ್ ಕ್ಲೂನೆಟ್. ಆತ ಒಳ್ಳೆಯ ವಕೀಲನಾದರೂ ಬೇಹುಗಾರಿಕೆಯ ವಿಷಯದಲ್ಲಿ ಆತ ಅಸಹಾಯಕನೆಂಬುದು ಆತನಿಗೆ ತಿಳಿದಿತ್ತು. ಅಲ್ಲದೆ ಆತನ ಪರಿಣತಿ ಇದ್ದದ್ದು ಅಂತರ ರಾಷ್ಟ್ರೀಯ ಕಾರ್ಪೊರೇಟ್ ಲಾನಲ್ಲಿ.

ಮಾತಾ ಹರಿಯನ್ನು ಬಂಧಿಸಿ ಹಲವಾರು ತಿಂಗಳುಗಳ ನಂತರ 1917ರ ಜುಲೈ 24ರಂದು ಕೋರ್ಟ್ ಮಾರ್ಶಲ್ ಮೂಲಕ ಆಕೆಯ ವಿಚಾರಣೆ ನಡೆಸಲಾಯಿತು. ಆಕೆಯ ಖ್ಯಾತಿಯಿಂದಾಗಿ ಜನ ಆಕೆಯ ದುರಂತವನ್ನು ವೀಕ್ಷಿಸಲು ಕೋರ್ಟಿನಲ್ಲಿ ಕಿಕ್ಕಿರಿದಿದ್ದರು. ಆ ದಿನ ಆಕೆ ಆದಷ್ಟು ಶುಭ್ರ ಬಟ್ಟೆ ತೊಡಲು ಅವಕಾಶ ಮಾಡಿಕೊಟ್ಟಿದ್ದರು. ಕಪ್ಪುಕೂದಲ ಸುಂದರಿಯ ದೇಹದ ತೂಕ ಕೊಂಚ ಹೆಚ್ಚಾಗಿತ್ತು. ಅವಳು ಹೊದ್ದಿದ್ದ ಪಾರದರ್ಶಕ ಹೊದಿಕೆ ಮುಖದಿಂದ ಭುಜದ ಮೇಲೆ ಇಳಿದಿತ್ತು. ಬೇಸಿಗೆಯ ಧಗೆಯಿದ್ದರೂ ಕೈಗವಸು ತೊಟ್ಟಿದ್ದಳು.

ಫ್ರೆಂಚ್ ಸೇನೆಯ ಲೆಫ್ಟಿನೆಂಟ್ ಆಂಡ್ರೆ ಮಾರ್ನೆಟ್ ಪ್ರಮುಖ ಪ್ರಾಸಿಕ್ಯೂಟಿಂಗ್ ಅಟಾರ್ನಿ ಹಾಗೂ ಮಿಲಿಟರಿ ಕೋರ್ಟಿನ ಇತರ ಆರು ಜನ ವೀಕ್ಷಕರಿದ್ದರು. ಎಲ್ಲರೂ ಮಧ್ಯ ವಯಸ್ಸನ್ನು ದಾಟಿದ್ದವರು. ವಿಚಾರಣೆಯನ್ನು ರಹಸ್ಯವಾಗಿ ಮಾಡಬೇಕೆಂದೂ ಹಾಗೂ ವಿಚಾರಣೆಯ ಎಲ್ಲ ದಾಖಲೆಗಳನ್ನು ರಾಷ್ಟ್ರೀಯ ಸುರಕ್ಷಿತತೆಯ ದೃಷ್ಟಿಯಿಂದ ಸೀಲ್ ಮಾಡಿಡಬೇಕೆಂದು ತೀರ್ಮಾನಿಸಲಾಯಿತು. ಕುತೂಹಲದಿಂದ ನೆರೆದಿದ್ದ ಜನರನ್ನು ಹೊರಗೆ ಕಳುಹಿಸಿದರು.

ಎಲ್ಲ ಆರೋಪಗಳ ಜೊತೆಗೆ ಆಕೆ ಮಿಲಿಟರಿಯವರನ್ನೇ 'ಗ್ರಾಹಕ'ರನ್ನಾಗಿ ಆಯ್ಕೆಮಾಡಿಕೊಳ್ಳುತ್ತಿದ್ದುದರಿಂದ ಆಕೆಯ ಉದ್ದೇಶ ಸಮವಸ್ತ್ರದ ಗಂಡಸರ ಮೇಲಿನ ಆಕರ್ಷಣೆಯಲ್ಲ ಬೇಹುಗಾರಿಕೆಯೇ ಆಗಿತ್ತೆಂಬ ಆರೋಪವನ್ನೂ ಹೊರಿಸಿದರು. ಆಕೆಯ ವಕೀಲನಿಗೆ ಹೆಚ್ಚು ವಾದಮಾಡಲು ಆಸ್ಪದವೇ ಇರಲಿಲ್ಲ. ಸಾಕ್ಷಿಗಳು ಹೇಳಿದ್ದೇ ಸತ್ಯ, ಅವರನ್ನು ಪಾಟೀ ಸವಾಲುಮಾಡುವ ಅವಕಾಶವೂ ಆಕೆಯ ವಕೀಲನಿಗೆ ಇರಲಿಲ್ಲ. ಆಕೆಯ ಯಾವುದೇ ಮಾತನ್ನು ನ್ಯಾಯಾಲಯ ಅಂಗೀಕರಿಸಲಿಲ್ಲ.

ಸಾಕ್ಷಿ ಹೇಳಿದವರಲ್ಲಿ ಹೆನ್ರಿ ಮಾರ್ಗರೀ ಎಂಬ ವಿದೇಶ ಸಚಿವಾಲಯದ ಉನ್ನತ ದರ್ಜೆಯ ಅಧಿಕಾರಿಯೊಬ್ಬನೂ ಇದ್ದ. ಆತ ಹದಿನಾಲ್ಕು ವರ್ಷಗಳಿಂದ ಆಕೆಯ ಪ್ರಿಯಕರನಾಗಿದ್ದ. ಆತ ಆಕೆ ಬಂಧಿತಳಾಗುವ ಮೊದಲು ಆಕೆಯೊಂದಿಗೆ

ಮೂರುದಿನಗಳನ್ನು ಕಳೆದಿದ್ದ. 'ನೀನು ಆಕೆಯೊಂದಿಗೆ ಮೂರು ದಿನಗಳು ಕಳೆದಿದ್ದರೂ ಆಕೆಗೆ ನೀನು ಯಾವುದೇ ರಹಸ್ಯ ಮಾಹಿತಿ ಹೇಳಿಲ್ಲದೇ ಇರಲು ಹೇಗೆ ಸಾಧ್ಯ?' ಎಂದು ಕೇಳಿದ ಪ್ರಾಸಿಕ್ಯೂಟರ್‌ಗೆ ಆತ ಹೇಳಿದ, 'ನಾನು ಸದಾ ಕೆಲಸದ ಒತ್ತಡದಲ್ಲಿರುವ ಮನುಷ್ಯ ಹಾಗೂ ಹಗಲು ರಾತ್ರಿ ಯುದ್ಧದ್ದೇ ಚಿಂತೆ. ಆ ಚಿಂತೆ, ಒತ್ತಡಗಳಿಂದ ಬಿಡುಗಡೆ ಹೊಂದಲೇ ನಾನು ಆಕೆಯೊಂದಿಗೆ ಕಾಲ ಕಳೆದು ಭಾರತೀಯ ಕಲೆ, ಪ್ರೇಮ, ತತ್ವಜ್ಞಾನದ ಬಗ್ಗೆ ಚರ್ಚಿಸುತ್ತಿದ್ದೆ. ನಿಮಗದು ಅಸತ್ಯವೆನ್ನಿಸಬಹುದು, ಆದರೆ ಅದೇ ಸತ್ಯ. ಆಕೆ ಗೂಢಚಾರಳೆಂಬುದನ್ನು ನಾನು ನಂಬುವುದಿಲ್ಲ' ಎಂದು ಹೇಳಿ ಕೋರ್ಟ್ ಹಾಲಿನಿಂದ ಹೊರಹೋಗುವ ಮೊದಲು ಮಾತಾ ಹರಿಗೆ ಬಗ್ಗಿ ವಂದಿಸಿ ಹೋದ.

'ಜರ್ಮನಿಯ ವಿದೇಶಿ ಸಚಿವರು ನಿನಗೇಕೆ 30000 ಮಾರ್ಕ್ ಹಣ ನೀಡಿದರು?' ಎಂಬ ಪ್ರಶ್ನೆಗೆ ಆಕೆ, 'ಅದು ನನ್ನ ಸೇವೆಗಾಗಿ ದೊರಕಿದ ಹಣ. ನನ್ನ ಪ್ರಿಯಕರರು ನನಗೆಂದೂ ಕಡಮೆ ಹಣ ನೀಡುತ್ತಿರಲಿಲ್ಲ' ಎಂದಳು.

'ನೀನು ಪ್ಯಾರಿಸ್ಸಿನಿಂದ ಪತ್ರಗಳನ್ನು ಬರೆಯುತ್ತಿದ್ದೆಯೆಲ್ಲಾ, ಅದರಲ್ಲಿ ಏನೇನು ಗುಪ್ತ ಮಾಹಿತಿ ಕಳುಹಿಸುತ್ತಿದ್ದೆ?'

'ಅವು ನಾನು ನನ್ನ ಮಗಳಿಗೆ ಬರೆದ ಪತ್ರಗಳು. ಇದ್ದ ನನ್ನ ಒಬ್ಬಳೇ ಮಗಳನ್ನು ಭೇಟಿಯಾಗಲು ಕೋರಿ ಪತ್ರಗಳನ್ನು ಬರೆಯುತ್ತಿದ್ದೆ. ನನ್ನ ದುರಾದೃಷ್ಟವೆಂದರೆ ಅವ್ಯಾವುವೂ ಅವಳನ್ನು ತಲುಪಲೇ ಇಲ್ಲ' ಎಂದಳು ಗದ್ಗದಿತಳಾಗಿ.

ಆದರೆ ಆಕೆಯ ಬಗೆಗಿನ ತೀರ್ಮಾನ ಮೊದಲೇ ನಿರ್ಧರಿತವಾಗಿತ್ತು. ಮೆಡಿಟರೇನಿಯನ್‌ನಲ್ಲಿ ಫ್ರೆಂಚ್ ಸಾಗಾಣಿಕೆ ಹಡಗುಗಳ ಮೇಲಿನ ಬಾಂಬ್ ದಾಳಿಯಲ್ಲಿ ಐವತ್ತು ಸಾವಿರ ಜನ ಸತ್ತಿದ್ದರು. ಅದಕ್ಕೆ ಶತ್ರುಗಳಿಗೆ ಆಕೆ ನೀಡಿದ ಮಾಹಿತಿಯೇ ಕಾರಣವೆಂದು ಯಾವುದೇ ಸಾಕ್ಷ್ಯಾಧಾರಗಳಿಲ್ಲದಿದ್ದರೂ ತೀರ್ಮಾನಿಸಿದರು. ನಿರಂತರವಾಗಿ ಮೂರು ವರ್ಷಗಳಿಂದ ಇದ್ದ ಯುದ್ಧಕ್ಕಾಗಿ, ಜರ್ಮನಿಯ ಮೇಲಿನ ಸಿಟ್ಟಿಗಾಗಿ, ಯುದ್ಧದಲ್ಲಿ ತಮ್ಮ ಸೋಲಿಗಾಗಿ ಫ್ರೆಂಚರಿಗೆ ಒಂದು ಬಲಿಪಶು ಬೇಕಾಗಿತ್ತು. ಸಂತಸದ ದಿನಗಳಲ್ಲಿ ಆಕೆಯನ್ನು ಕಲಾವಿದಳಂತೆ ಕಂಡರು. ನಂತರ ಅವರಿಗೆ ಆಕೆ ಒಬ್ಬ ಅತಿಕಾಮಿ ಹೆಂಗಸು, ತಮ್ಮ ಎಲ್ಲ ಅಧಿಕಾರಿಗಳನ್ನು ಆಕರ್ಷಿಸಿ, ಎಂಥದೋ ಮೋಡಿ ಮಾಡಿ ಅವರಿಂದ ಎಲ್ಲ ರಹಸ್ಯಗಳನ್ನು ಪಡೆದು ಶತ್ರುಗಳಿಗೆ ತಿಳಿಸಿಬಿಡುತ್ತಾಳೆ, ಯುದ್ಧದಲ್ಲಿ ತಮ್ಮ ಸೋಲಿಗೆ ಅವಳು, ಅವಳ ಕಾಮವೇ ಕಾರಣ ಎಂಬ ಭ್ರಮೆಯಲ್ಲಿದ್ದರು ಫ್ರೆಂಚರು.

ಬೇಹುಗಾರಿಕೆಯಲ್ಲಿ ತೊಡಗಿದ್ದ ಯಾರಿಗೇ ಕೊಡುವ ಶಿಕ್ಷೆಯನ್ನೇ ಆಕೆಗೆ ವಿಧಿಸಿದರು– ಮರಣ ದಂಡನೆ. ಅಲ್ಲದೆ ಆಕೆ ನ್ಯಾಯಾಲಯದ ವೆಚ್ಚವನ್ನೂ ಕಟ್ಟಿಕೊಡಬೇಕೆಂದು ಹೇಳಿದರು.

ಅದನ್ನು ಕೇಳಿದ ಮಾತಾ ಹರಿ ಗರಬಡಿದವಳಂತೆ ನಿಂತಳು. ಅವಳಿಗೆ ಏನು ಹೇಳಲೂ ತೋಚಲಿಲ್ಲ. ಕಲ್ಲಾದವಳಂತೆ ಶೂನ್ಯದತ್ತ ನೋಟ ನೆಟ್ಟಿದ್ದಳು. ಆಕೆಯ ಪಕ್ಕದಲ್ಲಿದ್ದ ಆಕೆಯ ವಕೀಲ ಎಡ್ವರ್ಡ್ ಕ್ಲೂನೆಟ್ ಕಣ್ಣೀರು ಹಾಕುತ್ತಿದ್ದ.

ಫ್ರಾನ್ಸಿನಲ್ಲಿ ಆಗ ಮರಣದಂಡನೆಯ ಶಿಕ್ಷೆಗೊಳಗಾದವರನ್ನು ಕೂಡಲೇ ಕೊಲ್ಲುತ್ತಿರಲಿಲ್ಲ. ಖೈದಿಗಳಿಗೆ ಆ ದಿನ ಯಾವುದೆಂದು ತಿಳಿಸುವುದೇ ಇಲ್ಲ, ಏಕೆಂದರೆ ಖೈದಿಗೆ ತನ್ನ ಸಾವಿನ ತಿಳಿಸುವುದು ಅಮಾನವೀಯವಾದುದು ಎಂದು ಅವರು ನಂಬಿದ್ದರು. ಎಂದು ಬೆಳಗಿನ ಜಾವ ಬಂದು ಮಲಗಿದ್ದ ಖೈದಿಯನ್ನು ಎಬ್ಬಿಸಿ ಸಿದ್ಧವಾಗಲು ತಿಳಿಸುತ್ತಾರೋ ಅಂದೇ ಆ ಖೈದಿಯ ಕೊನೆಯ ದಿನ. ಅಲ್ಲದೆ ಆದಿನ ಖೈದಿಯನ್ನು ನಿದ್ದೆಯಿಂದ ಎಬ್ಬಿಸಲು ಬರುವಾಗ ಆದಷ್ಟು ಜೋರಾಗಿ ಮಾತನಾಡುತ್ತ ಗಲಾಟೆ ಮಾಡುತ್ತಾ ಬರಬೇಕು. ನಿದ್ದೆಯಲ್ಲಿದ್ದ ಖೈದಿಗೆ ಎಚ್ಚರವಾಗಿ ತನ್ನ ಸಾವು ಆ ದಿನವೇ ಇರುವುದು ಅಧಿಕಾರಿಗಳು ಹೇಳುವ ಮೊದಲೇ ತಿಳಿದುಬಿಡಬೇಕು. ಇದರಿಂದ ಅಧಿಕಾರಿಗಳಿಗೆ ಖೈದಿಗೆ ಸಿದ್ಧವಾಗುವಂತೆ ತಿಳಿಸುವುದು ಸುಲಭವಾಗುತ್ತದೆ. ಮಾತಾ ಹರಿಗೆ ಅತ್ಯಂತ ಯಾತನೆಯ ದಿನಗಳವು. ಸಾವು ಖಾತ್ರಿಯಾಗಿದೆ, ಆದರೆ ಅದಕ್ಕಾಗಿ ಕಾಯುವುದು ಅತ್ಯಂತ ಘೋರ ಹಿಂಸೆ. ಪ್ರತಿ ರಾತ್ರಿ ಮಲಗುವಾಗಲೂ ಎಂಥದೋ ಆತಂಕ, ಹೆದರಿಕೆ. ನಾಳೆಯ ದಿನ ಕೊನೆಯ ದಿನವಾಗಿರಬಹುದೇ? ಹಿಂಸೆಯಿಂದ ಆಕೆಗೆ ನಿದ್ದೆಯೇ ಬರುತ್ತಿರಲಿಲ್ಲ. ಬಂಧೀಖಾನೆಯ ವೈದ್ಯರನ್ನು ಕೇಳಿ ನಿದ್ದೆ ಮಾತ್ರೆಗಳನ್ನು ನುಂಗುತ್ತಿದ್ದಳು. ಶನಿವಾರ ರಾತ್ರಿ ಮಲಗುವಾಗ ಮಾತ್ರ ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಳು. ಏಕೆಂದರೆ ಫ್ರಾನ್ಸ್‌ನಲ್ಲಿ ಭಾನುವಾರ ರಜೆ, ಯಾವುದೇ ಖೈದಿಗಳನ್ನು ಕೊಲ್ಲುವುದಿಲ್ಲ. ಬಂಧೀಖಾನೆಯ ಪಿಷ್ಟದ ಆಹಾರ ತಿಂದು ಯಾವುದೇ ದೈಹಿಕ ಚಟುವಟಿಕೆಗಳಿಲ್ಲದೆ ಮಾತಾ ಹರಿ ದಪ್ಪವಾಗಿದ್ದಳು. ಆಕೆಯ ಕೊನೆಯ ದಿನದ ಫೋಟೋಗಳಲ್ಲಿ ಆಕೆ ದಪ್ಪವಾಗಿ ದುಃಖದಿಂದಿರುವುದು ಕಾಣುತ್ತದೆ.


ತಾನು ಬಸುರಿಯೆಂದು ಹೇಳಿ ಮರಣದಂಡನೆಯನ್ನು ತಡೆಯಲು ಕೋರುವಂತೆ ಆಕೆಯ ವಕೀಲ ತಿಳಿಸಿದ. ಆಕೆ ಅದಕ್ಕೆ ಒಪ್ಪಲಿಲ್ಲ. ಕೊನೆಯ ಪ್ರಯತ್ನವಾಗಿ ತಾನು ನಿರ್ದೋಷಿಯೆಂದೂ ತನ್ನ ಮೇಲೆ ದಯೆತೋರಬೇಕೆಂದು ಕೋರಿ ಫ್ರೆಂಚ್ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದಳು.

ಆದಿನ 1917ರ ಅಕ್ಟೋಬರ್ 15, ಸೋಮವಾರ. ಆಕೆಯನ್ನು ಕರೆದುಕೊಂಡು ಬರುವ ಕಾರ್ಯವನ್ನು ಕ್ಯಾಪ್ಟನ್ ಬೋಶಾರ್ಡನ್‌ಗೆ ವಹಿಸಲಾಗಿತ್ತು. ನಿದ್ರೆ ಔಷಧಿಯ ಪ್ರಭಾವದಿಂದ ಮಾತಾ ಹರಿ ಗಾಢ ನಿದ್ರೆಯಲ್ಲಿದ್ದಳು. ಅಧಿಕಾರಿಗಳು, ಕ್ರೈಸ್ತ ಸಂನ್ಯಾಸಿನಿಯರು ಜೋರಾಗಿ ಮಾತನಾಡುತ್ತ, ಬೂಟುಗಾಲುಗಳ ಸಪ್ಪಳ ಮಾಡುತ್ತಾ ಬಂದರೂ ಆಕೆಗೆ ಎಚ್ಚರವಾಗಿರಲಿಲ್ಲ. ಇನ್ನೂ ನಿದ್ದೆಯ ಮಂಪರಿನಲ್ಲೇ ಇದ್ದ ಮಾತಾ ಹರಿಗೆ ಕ್ಯಾಪ್ಟನ್ ಬೋಶಾರ್ಡನ್, 'ಧೈರ್ಯ ತಂದುಕೊ. ನಿನ್ನ ದಯಾಕೋರಿಕೆ ಅರ್ಜಿಯನ್ನು ಫ್ರೆಂಚ್ ಅಧ್ಯಕ್ಷರು ತಿರಸ್ಕರಿಸಿದ್ದಾರೆ. ಈ ದಿನವೇ ನೀನು ಸಿದ್ಧವಾಗಿ ಹೊರಡಬೇಕು' ಎಂದು ದೃಢವಾಗಿ ಹೇಳಿದ.

ನಿದ್ದೆಯ ಮಂಪರಿನಲ್ಲಿದ್ದ ಮಾತಾ ಹರಿ ತಕ್ಷಣ ಬೆಚ್ಚಿ ಬೆವರಿದಳು. 'ಇಲ್ಲ, ಸಾಧ್ಯವೇ ಇಲ್ಲ!' ಎಂದು ಚೀರಿದಳು. ಕ್ರೈಸ್ತ ಸಂನ್ಯಾಸಿನಿಯರು ಮುಂದೆ ಬಂದು ಆಕೆಯನ್ನು ಸಂತೈಸಿದರು. ಅಷ್ಟರಲ್ಲಿ ವಾಸ್ತವತೆಗೆ ಬಂದಿದ್ದ ಮಾತಾ ಹರಿ ಕಳೆದ ಮೂರು ತಿಂಗಳುಗಳಲ್ಲಿ ಸಾವಿಗೆ ಮಾನಸಿಕವಾಗಿ ಸಿದ್ಧವಾಗುವ ತಯಾರಿ ನಡೆಸಿದ್ದಳು. ಸಾವರಿಸಿಕೊಂಡು, 'ಹೆದರಿಕೋ ಬೇಡಿ ಸಿಸ್ಟರ್, ನನಗೆ ಗೊತ್ತು ಹೇಗೆ ಸಾಯಬೇಕೆಂದು' ಎಂದು ಅವರಿಗೇ ಹೇಳಿದಳು. ತನ್ನಲ್ಲಿದ್ದ ಅತ್ಯುತ್ತಮ ಬಟ್ಟೆ ಧರಿಸಿದಳು, ಅತ್ಯುತ್ತಮ ಬೂಟು ಧರಿಸಿದಳು, ತಲೆಗೆ ಸ್ಕಾರ್ಫ್ ಕಟ್ಟಿಕೊಂಡಳು, ಕೈಗವಸು ತೊಟ್ಟಳು. ತಲೆಯೆತ್ತಿ ಸಾವಿನ ಮೆರವಣಿಗೆಯಲ್ಲಿ ಹೊರಟಳು.

ಇಡೀ ಊರೆಲ್ಲಾ ನಿದ್ರಿಸುತ್ತಿತ್ತು. ಆಕೆಯನ್ನು ಕಾರಿನಲ್ಲಿ ಮಸುಕು ಕತ್ತಲಿನಲ್ಲಿ ಊರಾಚೆಯ ಚೇಟೋ ವಿನ್ಸೆನ್ಸ್‌ಗೆ ಕರೆದೊಯ್ಯಲಾಯಿತು. ಅಲ್ಲಿ ಫೈರಿಂಗ್ ಸ್ಕ್ವಾಡ್ ಸಿದ್ಧವಾಗಿತ್ತು. ಹನ್ನೆರಡು ಜನ ಬಂದೂಕುಧಾರಿಗಳು ಮರದ ಬೊಡ್ಡೆಯೊಂದಕ್ಕೆ ಮುಖ ಮಾಡಿ ನಿಂತಿದ್ದರು. ಮಾತಾ ಹರಿ ಆ ಮರದ ಬೊಡ್ಡೆಯವರೆಗೆ ಧೈರ್ಯವಾಗಿಯೇ ನಡೆದು ಹೋದಳು. ಸಂಪ್ರದಾಯದಂತೆ ಸ್ವಲ್ಪ ರಮ್ ಕೊಟ್ಟಾಗ ಅದನ್ನು ಕುಡಿದಳು. ಸಾಯಲು ಬಂದವರಿಗೆ ಹೆದರಿಕೆಯಿಂದ ನಿಲ್ಲಲೇ ಸಾಧ್ಯವಾಗುವುದಿಲ್ಲ. ಹಾಗಾಗಿ ಅಂಥವರನ್ನು ಮರಕ್ಕೆ ಕಟ್ಟಿಬಿಡುತ್ತಾರೆ. ಮಾತಾ ಹರಿಯನ್ನು ಮರಕ್ಕೆ ಕಟ್ಟುತ್ತೇವೆಂದಾಗ ಬೇಡವೆಂದಳು; ಕಣ್ಣಿಗೆ ಬಟ್ಟೆ ಕಟ್ಟುತ್ತೇವೆಂದರೂ ತನಗೆ ಹೆದರಿಕೆಯಿಲ್ಲ, ಬೇಡವೆಂದಳು. ಸೂರ್ಯ ಉದಯಿಸಿ ರಾತ್ರಿಯ ಮಂಜನ್ನು ಕರಗಿಸುತ್ತಿದ್ದ. ಪಾದ್ರಿ ಮತ್ತು ಕ್ರೈಸ್ತ ಸಂನ್ಯಾಸಿನಿಯರು ತಮ್ಮ ಕರ್ತವ್ಯ ಮುಗಿಸಿ ಹಿಂದೆ ಸರಿದರು. ಫೈರಿಂಗ್ ಸ್ಕ್ವಾಡ್‌ನವರು

ಬಂಧೂಕುಗಳನ್ನು ಗುರಿಯಿಟ್ಟು ಸಂಕೇತಕ್ಕಾಗಿ ಕಾಯುತ್ತಿದ್ದರು. ಹನ್ನೆರಡು ಬಂಧೂಕುಗಳು ತನ್ನ ಎದೆಯನ್ನೇ ನೋಡುತ್ತಿರುವುದನ್ನು ಕಂಡಳು. ಬಲಗೈಯನ್ನು ಚುಂಬಿಸಿ ಚುಂಬನವನ್ನು ಗಾಳಿಯಲ್ಲಿ ಬಂಧೂಕುದಾರಿಗಳೆಡೆ ಹಾರಿ ಬಿಟ್ಟು



ಎದೆಯೊಡ್ಡಿ ನಿಂತಳು. ಸಂಕೇತ ದೊರೆತೊಡನೆಯೇ ಹನ್ನೆರಡು ಬಂಧೂಕುಗಳ ಸಪ್ಪಳ ಅದುವರೆಗೂ ಇದ್ದ ಮೌನವನ್ನು ಛಿದ್ರಿಸಿತು. ಆಕೆ ಚೀರಲಿಲ್ಲ, ಅರಚಲಿಲ್ಲ. ಎತ್ತಿದ ತಲೆ ಎತ್ತಿದಂತೆಯೇ ಇತ್ತು. ಮುಖ ನಿರ್ವಿಕಾರವಾಗಿತ್ತು. ಒಂದು ಗುಂಡು ಅವಳ ಹೃದಯ ಭೇದಿಸಿತ್ತು. ಆಕೆಯ ದೇಹ ಮೊಣಕಾಲೂರಿ ಕೂತಂತೆ ಕಂಡಿತು, ಒಂದರೆಕ್ಷಣ ತನ್ನ ಮೇಲೆ ಗುಂಡು ಹಾರಿಸಿದವರನ್ನು ದಿಟ್ಟಿಸಿ ನೋಡುತ್ತಿರುವಂತೆ ಭಾಸವಾಯಿತು. ನೋಡನೋಡುತ್ತಿದ್ದಂತೆಯೇ ಆಕೆಯ ದೇಹ ಹಿಂದಕ್ಕೆ ಬಾಗಿ ದೊಪ್ಪನೆ ಕಾಲುಮಡಚಿರುವಂತೆಯೇ ಹಿಂದಕ್ಕೆ ಬಿತ್ತು. ಅವಳ ಕಣ್ಣು ಆಕಾಶ ದಿಟ್ಟಿಸುತ್ತಿತ್ತು. ಮತ್ತೊಂದು ಸಂಪ್ರದಾಯ ಉಳಿದಿತ್ತು. ಅಲ್ಲಿರುವ ಫ್ರೆಂಚ್ ಅಧಿಕಾರಿ ತನ್ನ ರಿವಾಲ್ವಾರ್‌ನಲ್ಲಿ ಖೈದಿಯ ತಲೆಗೆ ಗುಂಡು ಹಾರಿಸಿ ಖೈದಿಯ ಸಾವನ್ನು ಖಾತ್ರಿಪಡಿಸಬೇಕು. ಮಾತಾ ಹರಿ ಆಗಲೇ ಸತ್ತಿದ್ದು ಆಕೆಯ ವಿಷಯದಲ್ಲಿ ಅದು ಅವಶ್ಯಕತೆಯಿಲ್ಲದಿದ್ದರೂ ಸಂಪ್ರದಾಯದಂತೆ ಕೆಳಗುರುಳಿದ್ದ ಮಾತಾ ಹರಿಯ ದೇಹದ ಬಳಿ ಬಂದು ತನ್ನ ರಿವಾಲ್ವಾರ್‌ನ ಗುಂಡುಗಳನ್ನು ಆಕೆಯ ತಲೆಯಲ್ಲಿ ಹೊಗಿಸಿದ. ಸತ್ತಾಗ ಮಾತಾ ಹರಿಯ ವಯಸ್ಸು 42 ವರ್ಷ.

10

ಆಕೆಯ ಸಾವಿನಲ್ಲೂ ಅನೇಕ ದಂತಕತೆಗಳು ಹುಟ್ಟಿಕೊಂಡವು. ಪಿಯರ್ರೆ ದ ಮೋರ್ರಿಸ್ಯಾಕ್ ಎಂಬ ಆಕೆಯ ಅಭಿಮಾನಿ ಫೈರಿಂಗ್ ಸ್ಕ್ವಾಡ್‌ನವರಿಗೆ ಲಂಚ ನೀಡಿ ನಿಜವಾದ ತೋಟಾಗಳ ಬದಲಿಗೆ ಖಾಲಿ ತೋಟಾಗಳನ್ನು ತುಂಬಿಸುವಂತೆ ಮಾಡಲು ಪ್ರಯತ್ನಿಸಿದ್ದ, ಆದರೆ ಅದು ಸಫಲವಾಗಲಿಲ್ಲ ಎಂದರು ಕೆಲವರು. ಸಾಯುವ ಮುನ್ನ ಹಠಾತ್ತನೆ ತಾನು ತೊಟ್ಟಿದ್ದ ಕೋಟನ್ನು ಕಿತ್ತೆಸೆದು ಫೈರಿಂಗ್ ಸ್ಕ್ವಾಡ್‌ನವರಿಗೆ ತನ್ನ ನಗ್ನದೇಹ ತೋರಿಸಿ ಅವರನ್ನು ಬೆಚ್ಚಿ ಬೀಳಿಸಿದಳು ಎಂದರು ಹಲವರು. ಆದರೆ ಅದೆಲ್ಲಾ ಅಷ್ಟು ಮುಖ್ಯವಲ್ಲ. ಮಾತಾ ಹರಿಗೆ ಸಾವು ಬಂದಾಗಿತ್ತು. ಇಡೀ ಯೂರೋಪಿನ ಗಂಡಸರನ್ನೇ ಮೋಡಿ ಮಾಡಿದ್ದ ಮಾತಾ ಹರಿ ಮರದ ಬೊಡ್ಡೆಯ ಬಳಿ ಹೆಣವಾಗಿ ಬಿದ್ದಿದ್ದಳು. ಅವಳ ಬದುಕಿನ ಕತೆಗಳಲ್ಲಿ ಎಷ್ಟು ಸತ್ಯವಿತ್ತು, ಎಷ್ಟು ಸುಳ್ಳಿತ್ತು ಎಂಬುದು ಯಾರಿಗೂ ತಿಳಿದಿಲ್ಲ.

ಆಕೆ ಬದುಕಿದ್ದಾಗ ಅವಳ ಹಿಂದೆ ಜನ ಸುತ್ತುತ್ತಿದ್ದರು. ಅವಳ ನೃತ್ಯ ನೋಡಲು ಜನ ಕಿಕ್ಕಿರಿಯುತ್ತಿದ್ದರು. ಸಂತೋಷ ಕೂಟಗಳಿಗೆ ಅವಳನ್ನು ತಮ್ಮ ಜೊತೆಯಲ್ಲಿ ಕರೆದೊಯ್ಯಲು ಹೆಚ್ಚು ಹೆಚ್ಚು ಹಣ ಕೊಡಲು ತಯಾರಿದ್ದರು. ಆದರೆ ಮಾತಾ ಹರಿಯ ಹೆಣವನ್ನು ಪಡೆಯಲು ಯಾರೂ 'ವಾರಸುದಾರರು' ಮುಂದೆ ಬರಲಿಲ್ಲ. ಹಾಗಾಗಿ ಆಕೆಯ ದೇಹವನ್ನು ವಿದ್ಯಾರ್ಥಿಗಳ ಅಧ್ಯಯನಕ್ಕಾಗಿ ವೈದ್ಯಕೀಯ ಶಾಲೆಯೊಂದಕ್ಕೆ ಕೊಡಲಾಯಿತು. ಆಕೆಯ ಆಸ್ತಿಯನ್ನೆಲ್ಲಾ ಮಾರಿ ಕೋರ್ಟಿನ ಶುಲ್ಕಕ್ಕೆ ವಜಾಮಾಡಿಕೊಂಡರು. ಮಾತಾ ಹರಿಯ ಗಂಡ ರುಡಾಲ್ಫ್ ಆಕೆಯ ಸಾವಿನ ಸುದ್ದಿ ಕೇಳಿ, 'ಆಕೆ ಬದುಕಿನಲ್ಲಿ ಏನೇನೋ ಮಾಡಿರಬಹುದು, ಆದರೆ ಆಕೆಗೆ ಇಂತಹ ಸಾವು ಬರಬಾರದಿತ್ತು' ಎಂದನಂತೆ.

ಕಾಕತಾಳೀಯವೆಂಬಂತೆ ಮಾತಾ ಹರಿಯ ಮಗಳು ನೋನ್, ತಾಯಿಯ ವಾತ್ಸಲ್ಯವಿಲ್ಲದೆ ಬೆಳೆದವಳು, ತಾಯಿಯನ್ನೇ ಬಹುವಾಗಿ ಹೋಲುತ್ತಿದ್ದವಳು ಇದ್ದಕ್ಕಿದ್ದಂತೆ ತನ್ನ ಇಪ್ಪತ್ತೊಂದನೆಯ ವಯಸ್ಸಿನಲ್ಲೇ ಹೃದಯಾಘಾತದಿಂದ ಸಾವನ್ನಪ್ಪಿದಳು. ಆಕೆಗೆ ಡಚ್ ಈಸ್ಟ್ ಇಂಡೀಸ್‌ಗೆ ಹೋಗಿ ಅಧ್ಯಾಪಕಿಯಾಗುವ ಆಸೆಯಿತ್ತು. ಆದರೆ ಒಂದು ರಾತ್ರಿ ಮಲಗಿದವಳು ಬೆಳಿಗ್ಗೆ ಏಳಲೇ ಇಲ್ಲ.

ಮಾತಾ ಹರಿಯ ತಲೆಯನ್ನು ಎಲ್ಲ ಪ್ರಖ್ಯಾತ ಅಪರಾಧಿಗಳ ತಲೆಯಂತೆ ಕತ್ತರಿಸಿ ಪ್ಯಾರಿಸ್ಸಿನ 'ಮೆಕಾಬರ್' ವಸ್ತು ಸಂಗ್ರಹಾಲಯದಲ್ಲಿ ಇಡಲಾಗಿತ್ತು.

ಎರಡನೇ ವಿಶ್ವಯುದ್ಧದ ಸಮಯದಲ್ಲಿ ಆ ತಲೆಯೂ ನಿಗೂಢವಾಗಿ ಮಾಯವಾಯಿತು.

1921ರಲ್ಲಿ ಹಾಲೆಂಡಿನ ಹೆನ್ರಿ ನೋಡ್‌ಮೇಕರ್ ಎಂಬಾತ ಆತ್ಮಹತ್ಯೆ ಮಾಡಿಕೊಂಡ. ಆತನ ಸಂಬಂಧಿಕರು ಹೇಳಿದಂತೆ ತನ್ನಿಂದಲೇ ಮಾತಾ ಹರಿ ಸತ್ತಿದ್ದು ಎಂಬ ಪಾಪಪ್ರಜ್ಞೆ ಆತನನ್ನು ಕಾಡುತ್ತಿತ್ತು. ಆತ ಬ್ರಿಟಿಷರಿಗೆ ಕೊಟ್ಟ ಸುಳ್ಳು ಮಾಹಿತಿಯಿಂದಲೇ ಮಾತಾಹರಿ ಗೂಢಚಾರಿಣಿ ಎಂಬ ಸಂಶಯ ಬಂದು ಆಕೆಯನ್ನು ಕೊಲ್ಲಲಾಯಿತು ಎನ್ನುವ ಕೊರಗಿನಲ್ಲೇ ಇದ್ದು ಕೊನೆಗೊಂದು ಆತ್ಮಹತ್ಯೆ ಮಾಡಿಕೊಂಡ ಎಂದರು. ಆತ ಮಾತಾ ಹರಿಯ ಬಗ್ಗೆ ಏಕೆ ಸುಳ್ಳು ಮಾಹಿತಿ ಕೊಟ್ಟಿದ್ದ? ಅದಕ್ಕೆ ಕಾರಣ 1916ರಲ್ಲಿ ನಡೆದ ಒಂದು ಘಟನೆ. ಮಾತಾ ಹರಿ 1916ರಲ್ಲಿ ಹಾಲೆಂಡಿನಿಂದ ಫ್ರಾನ್ಸ್‌ಗೆ ಝೀಲ್ಯಾಂಡಿಯಾ ಎಂಬ ಹಡಗಿನಲ್ಲಿ ವಿಗೊ ಮತ್ತು ಮ್ಯಾಡ್ರಿಡ್ ಮೂಲಕ ಹೋಗುತ್ತಿದ್ದಳು. ಅದೇ ಹಡಗಿನಲ್ಲಿ ಹಾಲೆಂಡಿನ ಹೆನ್ರಿ ನೋಡ್‌ಮೇಕರ್ ಸಹ ಇದ್ದ. ಆತ ಬ್ರಿಟಿಷ್ ಏಜೆಂಟನಾಗಿದ್ದು ಮಾತಾ ಹರಿ ಹೊರಗೆ ಇದ್ದಾಗ ಆಕೆಯ ಕ್ಯಾಬಿನ್ ಪ್ರವೇಶಿಸಿ ಅದೂ ಇದು ಹುಡುಕಾಟ ನಡೆಸಿದ್ದ. ಇದನ್ನು ತಿಳಿದ ಮಾತಾ ಹರಿ ಎಲ್ಲರೆದುರು ಆಕೆಯ ಕ್ಷಮಾಪಣೆ ಕೇಳುವಂತೆ ಒತ್ತಾಯಿಸಿದಳು. ಆತ ಒಪ್ಪದಿದ್ದಾಗ ಆಕೆ ಸಿಟ್ಟಿನಿಂದ ಆತನ ಕಪಾಳಕ್ಕೆ ಹೊಡೆದಿದ್ದಳು. ಹೊಡೆತ ಎಷ್ಟು ತೀವ್ರವಾಗಿತ್ತೆಂದರೆ ಆತನ ಬಾಯಿಯಿಂದ ರಕ್ತ ಸುರಿದಿತ್ತು. ಆಕೆಯ ಮೇಲಿನ ಸೇಡಿನಿಂದ ನೋಡ್‌ಮೇಕರ್ ಬ್ರಿಟಿಷರಿಗೆ ಆಕೆಯ ಬಗ್ಗೆ ಸುಳ್ಳು ಮಾಹಿತಿ ನೀಡಿದ್ದ. ಅದರಿಂದಲೇ ಅವಳ ಸಾವುಂಟಾಯಿತು ಎಂದೇ ಆತ ನಂಬಿದ್ದ.

ಮಾತಾ ಹರಿ ನಿರಪರಾಧಿ, ನಿರ್ದೋಷಿ ಎಂದು ಈಗಲೂ ನಂಬಿರುವ ಹಾಲೆಂಡಿನ ಆಕೆಯ ಊರಿನ ಜನ 1976ರಲ್ಲಿ ಆಕೆಯ ನೆನಪಿನಲ್ಲಿ ಲ್ಯೂವಾರ್ಡೆನ್ ಊರಿನಲ್ಲಿ ಆಕೆಯ ಕಂಚಿನ ವಿಗ್ರಹವನ್ನು ಸ್ಥಾಪಿಸಿದ್ದಾರೆ. ಅದೇ ಊರಿನ ಫ್ರೈಸ್ ಮ್ಯೂಸಿಯಂನಲ್ಲಿ ಆಕೆಯ ಕೈಬರಹವಿರುವ ಪುಸ್ತಕ ಹಾಗೂ ಆಕೆಯ ಅಭಿಮಾನಿಗಳ ನರ್ತನದ ಹೆಜ್ಜೆಯ ಗುರುತಿರುವ ಜಮಖಾನೆಯೊಂದನ್ನು ಶಾಶ್ವತ ಪ್ರದರ್ಶನದಲ್ಲಿರಿಸಿದ್ದಾರೆ. ಇಂದಿಗೂ ಅವರು ಆಕೆಯ ಕೇಸ್‌ನ ಕಡತವನ್ನು ತೆರೆದು ಮರುಪರಿಶೀಲಿಸಲು ಫ್ರೆಂಚ್ ಸರ್ಕಾರವನ್ನು ಕೋರುತ್ತಿದ್ದಾರೆ. ಆಕೆಯನ್ನು ಬೇಹುಗಾರಿಕೆ ಮಾಡುವಂತೆ ಒತ್ತಾಯಿಸಿದ ಫ್ರೆಂಚ್ ಸೇನೆಯ ಕಮ್ಯಾಂಡೆಂಟ್ ಲಡೂಕ್ಸ್‌ನನ್ನು 1918 ಬೇಹುಗಾರಿಕೆಯ ಆರೋಪದ ಮೇಲೆ ಬಂಧಿಸಲಾಯಿತು.



ವಾಸ್ತವವಾಗಿ ಮಾತಾ ಹರಿ ಬದುಕನ್ನು ಅತಿಯಾಗಿ ಪ್ರೀತಿಸುವ ಹೆಣ್ಣಾಗಿದ್ದಳು. ಅವಳ ಬದುಕಿನ ಪ್ರೀತಿ ಮತ್ತು 'ಪೌರುಷ' ಯುದ್ಧದ ಕ್ರೌರ್ಯ ಮುಖಾಮುಖಿಯಾಗಿ ನಿಲ್ಲಲು ಸಾಧ್ಯವಿರಲಿಲ್ಲ. ಯಾವುದಾದರೊಂದು ಸೋಲಲೇಬೇಕಿತ್ತು. ಆ ಕ್ರೌರ್ಯಕ್ಕೆ 'ಮುಂಜಾವಿನ ಕಣ್ಣು'– ಮಾತಾ ಹರಿ ಬಲಿಯಾದಳು.